# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯಲ್ಲಿ ದಿನಾಂಕ: 18-07-2019 ರಂದು ನಡೆದ ವಿಷಯಗಳ ಸಭೆಯ ನಡವಳಿಗಳು

**ವಿಷಯ ಸಂಖ್ಯೆ: ಸಾನ್ಯಾಸ್ಥಾಸ/ಪಿಆರ್/ 34/2019-20**

ಆಯುಕ್ತರು ರವರ ದಿನಾಂಕ:16-07-2019ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ:

2019-20ನೇ ಸಾಲಿನ ಆಯವ್ಯಯ ಅಂದಾಜುಗಳ ಪುಸ್ತಕದಲ್ಲಿ ಕಲ್ಯಾಣ ವಿಭಾಗದ ವಿವಿಧ ಲೆಕ್ಕಶೀಷಿಕೆಗಳಲ್ಲಿ ನಿಗದಿಪಡಿಸಿರುವ ಅನುಧಾನಗಳ ವಿವರಗಳು:

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶಗಳನ್ವಯ 2019-20ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯವು ಅನುಮೋದನೆಗೊಂಡಿರುತ್ತದೆ. 2019-20ನೇ ಸಾಲಿನ ಚಾಲ್ತಿ ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ | ವರ್ಗ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | ಶೇ.24.10%ರ ಅನುದಾನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳು | 37900.00 |
| 2 | ಶೇ 7.25% ರ ಅನುದಾನದಲ್ಲಿ ಹಿಂದುಳಿದ ' ಮತ್ತು ಅಲ್ಪಸಂಖ್ಯಾತ ವರ್ಗದವರ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳು | 10370.00 |
| 3 | ಆರ್ಥಿಕವಾಗಿ ಹಿಂದುಳಿದ ವರ್ಗಗದವರ ಕಲ್ಯಾಣ ಕಾರ್ಯಕ್ರಮ/ ಕಾಮಗಾರಿಗಳು | 1125.00 |
| 4 | ಸಾಮಾನ್ಯ ವರ್ಗದ ಕಲ್ಯಾಣ ಕಾರ್ಯಕ್ರಮಗಳು | 1900.00 |
| 5 | ವಿಶೇಷ ಚೇತನರ ಕಲ್ಯಾಣ ಕಾರ್ಯಕ್ರಮಗಳು | 8670.00 |
| 6 | ಮಹಿಳಾ ವರ್ಗದವರ ಕಲ್ಯಾಣ ಕಾರ್ಯಕ್ರಮ | 8505.00 |
| 7 | ಹಣಕಾಸು ಸಹಾಯ (ಅನುದಾನಗಳು-Grant in Aid) | 6449.00 |
| ಒಟ್ಟು | | 74919.00 |

### ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ತಿಮಾರ್ನಕ್ಕಾಗಿ ಸಲ್ಲಿಸಿರುವ ಪ್ರಸ್ತಾವನೆಗಳು:

### 1. 2018-19ನೇ ಸಾಲಿನಲ್ಲಿ ಖರ್ಚಾಗದೇ ಉಳದಿರುವ ಅರ್ಹ ಚಾಲ್ತಿ ಅನುದಾನವನ್ನು 2019-20ನೇ ಸಾಲಿಗೆ ನಿಯಮಾವಳಿಯಂತೆ ಮುಂದುವರೆಸುವ ಬಗ್ಗೆ

1.1 2018-19ನೇ ಸಾಲಿನ ಅನುಧಾನದ ಹಂಚಿಕೆ ಮತ್ತು ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳ ಕ್ರಿಯಾಯೋಜನೆಗೆ ದಿನಾಂಕ:25-10-2018 ರಂದು ಮಾನ್ಯ ಆಯುಕ್ತರವರ ಅನುಮೋದನೆಯಾಗಿದ್ದು, ಈ ಆಧಾರದ ಮೇಲೆ 2018-19ನೇ ಸಾಲಿನ ಕ್ರಿಯಾಯೋಜನೆಯಲ್ಲಿ ನಿಗಧಿಪಡಿಸಿರುವ ಅನುದಾನಕ್ಕೆ ಅನುಗುಣವಾಗಿ ವಲಯ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಹಾಗೂ ಟೆಂಡರ್ ಪ್ರಕ್ರಿಯೆಗಳನ್ನು ಸಿದ್ದತೆ ಮಾಡಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ರೀತಿಯ ಕ್ರಮವಹಿಸಲಾಗುತ್ತಿದ್ದು 2018-19ನೇ ಸಾಲಿನ ಆರ್ಥಿಕ ವರ್ಷ ಈಗಾಗಲೇ ಮುಕ್ತಾಯಗೊಂಡಿದ್ದು ಕಾರ್ಯಕ್ರಮಗಳು ಅನುಷ್ಠಾನದ ಹಂತದಲ್ಲಿರುತ್ತದೆ.

1.2 ಮೇಲ್ಕಂಡಂತೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮತ್ತು ಮಾನ್ಯ ಆಯುಕ್ತರ ಆದೇಶದಂತೆ 2018-19ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕೇಂದ್ರ ಕಛೇರಿ ಹಾಗೂ ವಲಯ ಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿದ್ದು, ಸಕ್ಷಮ ಪ್ರಾಧಿಕಾರದ

ಅಧ್ಯಕ್ಷರು

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner

19

ನಿರ್ಣಯ :

ಆಯುಕ್ತರವರ ದಿನಾಂಕ 16.07.2019ರ ಟಿಪ್ಪಣಿಯನ್ನು ಪರಿಶೀಲಿಸಿ ಸಮಿತಿಯ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ಮಾರ್ಪಾಡುಗಳನ್ನು ಮಾಡಿ ಅಗತ್ಯ ಕ್ರಮವಹಿಸಲು ಸಮಿತಿಯು ತೀರ್ಮಾನಿಸಿತು.

2019-20ನೇ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ವರ್ಗ/ಆರ್ಥಿಕವಾಗಿ ದುರ್ಬಲ ವರ್ಗದವರಿಗಾಗಿ ಲೆಕ್ಕ ಶೀರ್ಷಿಕೆ ಪಿ-2021, ಪಿ-2340 ಮತ್ತು ಪಿ-3286 ಗಳಲ್ಲಿ ಮೀಸಲಿರಿಸಿರುವ ಅನುದಾನದಡಿಯಲ್ಲಿ ಒಂಟಿಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅರ್ಹ ಫಲಾನುಭವಿಗಳ ಅಗತ್ಯ ದಾಖಲೆಗಳೊಂದಿಗೆ ವಾರ್ಡ್‌ಸಮಿತಿಯ ಅನುಮೋದನೆ ಪಡೆದು ನಿಯಮಾನುಸಾರ ಜಾಬ್ ಸಂಖ್ಯೆ ನೀಡಿ ವಲಯ ಅಪರ/ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರ ಹಂತದಲ್ಲಿ ನಿಗಧಿತ ಅವಧಿಯಲ್ಲಿಯೇ ಕಾರ್ಯಕ್ರಮ ಅನುಷ್ಠಾನಗೊಳಿಸುವುದು, ಒಂದುವೇಳೆ ವಾರ್ಡ್‌ಗೆ ನಿಗಧಿಪಡಿಸಿರುವ ಸಂಖ್ಯೆಗೆ ಅನುಗುಣವಾಗಿ ಒಂಟಿಮನೆಗಳ ಫಲಾನುಭವಿಗಳು ಲಭ್ಯವಿಲ್ಲದಿದ್ದಲ್ಲಿ ಪರಿಶೀಲಿಸಿಕೊಂಡು ಅವಶ್ಯಕತೆಯಿರುವ ಇತರೆ ವಾರ್ಡ್‌ಗಳಿಗೆ ವಲಯ ಅಪರ/ಜಂಟಿ ಆಯುಕ್ತರ ಹಂತದಲ್ಲಿಯೇ ತೀರ್ಮಾನಿಸಿ ಉಪಯೋಗಿಸಿಕೊಳ್ಳಲು ಅಗತ್ಯ ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

2019-20ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಫಲಾನುಭವಿಗಳಿಗೆ ನೀಡುವಂತಹ ಉಪಕರಣಗಳು ಮತ್ತು ಸಾಮಗ್ರಿಗಳನ್ನು 198 ವಾರ್ಡ್‌ಗಳಲ್ಲಿ ಏಕಕಾಲದಲ್ಲಿ ಕಾರ್ಯಕ್ರಮವನ್ನು ವಿತರಣೆ ಮಾಡುವ ಹಿತದೃಷ್ಟಿಯಿಂದ ಈ ಕಾರ್ಯಕ್ರಮಗಳ ಟೆಂಡರ್ ಪ್ರಕ್ರಿಯೆಯನ್ನು ಕೇಂದ್ರ ಕಛೇರಿಯಲ್ಲಿ ನಡೆಸಿ ಉಪಕರಣಗಳು ಮತ್ತು ಸಾಮಗ್ರಿಗಳನ್ನು ಎಲ್ಲಾ ವಲಯಗಳಿಗೆ ಏಕಕಾಲದಲ್ಲಿ ಸರಬರಾಜು ಮಾಡಲು ಅಗತ್ಯ ಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ವರ್ಗ/ ಆರ್ಥಿಕವಾಗಿ ದುರ್ಬಲ ವರ್ಗ, ಮಹಿಳೆಯರಿಗಾಗಿ ಮತ್ತು ಇತರರಿಗಾಗಿ ಪ್ರಸ್ತಾಪಿಸಿರುವ ಕಾರ್ಯಕ್ರಮಗಳೊಂದಿಗೆ 1) IAS/KAS ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳಿಗೆ ತರಬೇತಿ, ಬ್ಯಾಂಕಿಂಗ್, ಗ್ರೂಪ್ 'ಸಿ' ಹುದ್ದೆಗಳು ಹಾಗೂ ಇನ್ನಿತರೆ ಪರೀಕ್ಷೆಗಳಿಗೆ ಭಾಗವಹಿಸುವ ಅಭ್ಯರ್ಥಿಗಳಿಗೆ ಪಾಲಿಕೆಯಿಂದ ತರಬೇತಿ ನೀಡುವುದು ಅಥವಾ ಈ ಪರೀಕ್ಷೆಗಳಿಗೆ ತರಬೇತಿ ಪಡೆದಿರುವ ಅಭ್ಯರ್ಥಿಗಳಿಗೆ ಶುಲ್ಕ ಗರಿಷ್ಟ ರೂ.50,000/- ಮೀರದಂತೆ ಮರುಪಾವತಿಸುವುದು. 2) ಸ್ವಸಹಾಯ/ಸ್ತ್ರೀ ಶಕ್ತಿ ಸಂಘಗಳು ಬ್ಯಾಂಕ್ ಲಿಂಕೇಜ್ ಮುಖಾಂತರ ಸಾಲಪಡೆದಲ್ಲಿ ಶೇ.50ರಷ್ಟು ಅಥವಾ ಗರಿಷ್ಟ ರೂ. ರೂ.1.50ಲಕ್ಷಗಳಿಗೆ ಮೀರದಂತೆ ಸಹಾಯಧನ/ಸಬ್ಸಿಡಿ ನೀಡುವುದು ಈ ಕಾರ್ಯಕ್ರಮಗಳನ್ನು 2019-20ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಸಮಿತಿಯು ತೀರ್ಮಾನಿಸಿತು. ಲ್ಯಾಪ್ ಟಾಪ್ ಮತ್ತು ಹೊಲಿಗೆಯಂತ್ರಗಳನ್ನು ವಿತರಣೆಗೆ ಸಂಬಂಧಪಟ್ಟ ಲೆಕ್ಕಶೀರ್ಷಿಕೆಗಳಲ್ಲಿ ಲಭ್ಯವಿರುವ ಮೊತ್ತದಲ್ಲಿ ವಾರ್ಡ್ ಸಂಖ್ಯೆ 117-ಶಾಂತಿನಗರ ವಾರ್ಡ್‌ಗೆ ಒಟ್ಟು ರೂ.125.00ಲಕ್ಷಗಳನ್ನು ನಿಗಧಿಪಡಿಸಿ ಲ್ಯಾಪ್‌ಟಾಪ್ ಮತ್ತು ಹೊಲಿಗೆ ಯಂತ್ರಗಳನ್ನು ಅಧಿಕವಾಗಿ ವಿತರಿಸಲು ಅಗತ್ಯ ಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

2019-20ನೇ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3133 ಟ್ರಾನ್ಸ್‌ಜೆಂಡರ್‌ಗಳ ಕೌಶಲ್ಯ ಅಭಿವೃದ್ಧಿ ಹಾಗೂ ಹಣಕಾಸು ನೆರವು ಕಾರ್ಯಕ್ರಮದಡಿ ಪ್ರಸ್ತಾಪಿಸಿರುವ ಕಾರ್ಯಕ್ರಮಗಳೊಂದಿಗೆ 1) ಸ್ವಯಂ ಉದ್ಯೋಗಕ್ಕಾಗಿ ಗರಿಷ್ಟ ರೂ. 1.50ಲಕ್ಷಗಳು ಮೀರದಂತೆ ಸಹಾಯಧನ 2) ವೈದ್ಯಕೀಯ ಸೇವೆ ಪಡೆದಿದ್ದಲ್ಲಿ ಗರಿಷ್ಟ ರೂ. 1.50ಲಕ್ಷಗಳು ಮೀರದಂತೆ ಮರುಪಾವತಿ ಸಹಾಯಧನ ಪಾಲಿಕೆಯ ವ್ಯಾಪ್ತಿಯಲ್ಲಿ ಟ್ರಾನ್ಸ್‌ಜೆಂಡರ್‌ಗಳ ಸಮೀಕ್ಷೆಯನ್ನು ಆದ್ಯತೆಯ ಮೇಲೆ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.



ಅಧ್ಯಕ್ಷರು

ಸಾಮಾನ್ಯ ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

2019-20ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-1878 ಮೂಲಭೂತ ಸೌಕರ್ಯಗಳು(ಸಮುದಾಯ ಕಾರ್ಯಕ್ರಮ) ರಡಿಯಲ್ಲಿ ಮೀಸಲಿರಿಸಿರುವ ಅನುದಾನವನ್ನು ಹಂಚಿಕೆ ಮಾಡುವ ಕುರಿತು ಟಿಪ್ಪಣಿಯಲ್ಲಿನ ವಿವರಗಳನ್ನು ಪರಿಶೀಲಿಸಿ, ಸಮಿತಿಯು ಚರ್ಚಿಸಿ, ಪರಿಶಿಷ್ಟ ಜಾತಿ/ಪಂಗಡದ ಸಮುದಾಯದವರು ಶೇ.50ಕ್ಕಿಂತ ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ರಸ್ತೆ, ಚರಂಡಿ, ಒಳಚರಂಡಿ, ಕುಡಿಯುವ ನೀರು, ಬೀದಿ ದೀಪಗಳು, ಸಾಮೂಹಿಕ ಶೌಚಾಲಯಗಳು ಮತ್ತು ಇತರೆ ಅಭಿವೃದ್ಧಿ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸ್ಥಳೀಯ ಪಾಲಿಕೆ ಸದಸ್ಯರು ಹಾಗೂ ಶಾಸಕರು ಕೋರಿರುವ ಮೇರೆಗೆ ಲೆಕ್ಕಶೀರ್ಷಿಕೆಯಲ್ಲಿ ಲಭ್ಯವಿರುವ ಅನುದಾನದಕ್ಕೆ ಮಿತಿಗೊಳಿಸಿ ವಾರ್ಡ್ ಸಂಖ್ಯೆ:175, 188, 194, 187, 139, 72, 39, 159, 12, 91, 10, 9, 27, 150, 60, 40, 11, 138, ಮತ್ತು ವಾರ್ಡ್ ಸಂಖ್ಯೆ: 4ಕ್ಕೆ ಪ್ರತಿ ವಾರ್ಡ್‌ಗೆ ರೂ. 100.00ಲಕ್ಷಗಳಂತೆ, ವಾರ್ಡ್ ಸಂಖ್ಯೆ. 147, 32, 31, 197, 92, ಮತ್ತು ವಾರ್ಡ್ ಸಂಖ್ಯೆ: 9ಕ್ಕೆ ಪ್ರತಿ ವಾರ್ಡ್‌ಗೆ ರೂ. 150.00ಲಕ್ಷಗಳಂತೆ, ವಾರ್ಡ್ ಸಂಖ್ಯೆ: 77, 94, 95, 96, 40, 3, 6, 83, 86, 85, 12, 149, 6, 61, ಮತ್ತು ವಾರ್ಡ್ ಸಂಖ್ಯೆ 22ಕ್ಕೆ ಪ್ರತಿ ವಾರ್ಡ್‌ಗೆ ರೂ.200.00ಲಕ್ಷಗಳಂತೆ, ವಾರ್ಡ್ ಸಂಖ್ಯೆ: 4ಕ್ಕೆ ರೂ.250.00ಲಕ್ಷಗಳು, ವಾರ್ಡ್ ಸಂಖ್ಯೆ.99ಕ್ಕೆ ರೂ. 300.00ಲಕ್ಷಗಳಂತೆ. ವಾರ್ಡ್ ಸಂಖ್ಯೆ: 124, 133, 13, 198, ವಾರ್ಡ್ ಸಂಖ್ಯೆ. 120ಕ್ಕೆ ಪ್ರತಿ ವಾರ್ಡ್‌ಗೆ ರೂ. 400.00ಲಕ್ಷಗಳಂತೆ, ವಾರ್ಡ್ ಸಂಖ್ಯೆ: 72, 130 ಮತ್ತು ವಾರ್ಡ್ ಸಂಖ್ಯೆ. 59ಕ್ಕೆ ಪ್ರತಿ ವಾರ್ಡ್‌ಗೆ ರೂ. 500.00ಲಕ್ಷಗಳಂತೆ, ವಾರ್ಡ್ ಸಂಖ್ಯೆ. 117ಕ್ಕೆ ರೂ. 599.00ಲಕ್ಷಗಳು, ವಾರ್ಡ್ ಸಂಖ್ಯೆ. 108ಕ್ಕೆ ರೂ. 51.00ಲಕ್ಷಗಳು, ವಾರ್ಡ್ ಸಂಖ್ಯೆ. 157 ಮತ್ತು 139ಕ್ಕೆ ಪ್ರತಿ ವಾರ್ಡ್‌ಗೆ ರೂ.25.00ಲಕ್ಷಗಳಂತೆ ವಾರ್ಡ್ ಸಂಖ್ಯೆ. 51ಕ್ಕೆ ಮತ್ತು 52ಕ್ಕೆ ಪ್ರತಿ ವಾರ್ಡ್‌ಗೆ ರೂ. 55.00ಲಕ್ಷಗಳು, ವಾರ್ಡ್ ಸಂಖ್ಯೆ. 25ಕ್ಕೆ ರೂ. 65.00ಲಕ್ಷಗಳು, ವಾರ್ಡ್ ಸಂಖ್ಯೆ. 26ಕ್ಕೆ ರೂ.75.00ಲಕ್ಷಗಳು, ವಾರ್ಡ್ ಸಂಖ್ಯೆ. 40ಕ್ಕೆ ರೂ. 200.00ಲಕ್ಷಗಳು, ಅನುದಾನವನ್ನು ಸಮಿತಿಯು ಹಂಚಿಕೆ ಮಾಡಿದೆ, ಈ ವಾರ್ಡ್‌ಗಳಲ್ಲಿ ಸ್ಥಳೀಯ ಪಾಲಿಕೆ ಸದಸ್ಯರು / ಶಾಸಕರು ಸೂಚಿಸುವ ಕಾಮಗಾರಿಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿಕೊಂಡು ಹಂಚಿಕೆ ಮಾಡಿರುವ ವಾರ್ಡ್‌ಗಳ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಜಾಬ್‌ಕೋಡ್ ನೀಡಿ, ಪರಿಶಿಷ್ಟ ಜಾತಿ/ಪಂಗಡದ ಸಮುದಾಯದವರಿಗೆ ತುರ್ತಾಗಿ ಮೂಲ ಸೌಕರ್ಯಗಳನ್ನು ಒದಗಿಸುವ ಹಿತದೃಷ್ಟಿಯಿಂದ ಕಾಮಗಾರಿಗಳನ್ನು ಮೆ॥ ಕೆಆರ್‌ಐಡಿಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳಲು ಹಾಗೂ ಯಾವುದೇ ಲೋಪವಾಗದಂತೆ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ಅಗತ್ಯಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

2019-20ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-2652 ರಡಿಯಲ್ಲಿ ಮೀಸಲಿರಿಸಿರುವ ಅನುದಾನವನ್ನು ಪರಿಶಿಷ್ಟ ಜಾತಿ/ಪಂಗಡದ ಸಮುದಾಯದವರು ಶೇ.50ಕ್ಕಿಂತ ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಮೂಲಭೂತಸೌಕರ್ಯಗಳಿಗಾಗಿ ಸದ್ಬಳಕೆ ಮಾಡುವ ನಿಟ್ಟಿನಲ್ಲಿ ರಸ್ತೆಗಳು, ಕಾಂಕ್ರೀಟ್ ರಸ್ತೆಗಳು, ಕಲ್ವರ್ಟ್‌ಗಳು, ಚರಂಡಿಗಳು, ಒಳಚರಂಡಿ, ಕುಡಿಯುವ ನೀರು, ಬೀದಿ ದೀಪಗಳು, ಶೌಚಾಲಯಗಳು ಮತ್ತು ಇತರೆ ಅಭಿವೃದ್ಧಿ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸಮಿತಿಯು ಅಭಿಪ್ರಾಯಿಸಿ ಪಾಲಿಕೆ ಸದಸ್ಯರು ಹಾಗೂ ಶಾಸಕರು ಕೋರುವ ಕಾಮಗಾರಿಗಳನ್ನು ಕೈಗೊಳ್ಳಲು ಈ ಲೆಕ್ಕಶೀರ್ಷಿಕೆಯಲ್ಲಿ ಲಭ್ಯವಿರುವ ಅನುದಾನದಕ್ಕೆ ಮಿತಿಗೊಳಿಸಿ ವಾರ್ಡ್ ಸಂಖ್ಯೆ: 130ಕ್ಕೆ ರೂ.100.00ಲಕ್ಷಗಳು, ವಾರ್ಡ್ ಸಂಖ್ಯೆ: 133ಕ್ಕೆ ರೂ.199.00ಲಕ್ಷಗಳು, ವಾರ್ಡ್ ಸಂಖ್ಯೆ. 13ಕ್ಕೆ ರೂ.100.00ಲಕ್ಷಗಳು ಮತ್ತು ವಾರ್ಡ್ ಸಂಖ್ಯೆ. 117ಕ್ಕೆ ರೂ.100.00ಲಕ್ಷಗಳು ಅನುದಾನವನ್ನು ಸಮಿತಿಯು ಹಂಚಿಕೆ ಮಾಡಿ ತೀರ್ಮಾನಿಸಿದೆ. ಈ ವಾರ್ಡ್‌ಗಳ ವ್ಯಾಪ್ತಿಯಲ್ಲಿನ ಕಾಮಗಾರಿಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿಕೊಂಡು ಸದರಿ ಕಾಮಗಾರಿಗಳಿಗೆ ಜಾಬ್‌ಕೋಡ್ ನೀಡಿ, ಪರಿಶಿಷ್ಟ ಜಾತಿ/ಪಂಗಡದ ಸಮುದಾಯದವರಿಗೆ ತುರ್ತಾಗಿ ಮೂಲ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾಮಗಾರಿಗಳನ್ನು ಮೆ॥ ಕೆಆರ್‌ಐಡಿಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳಲು ಹಾಗೂ ಯಾವುದೇ ಲೋಪವಾಗದಂತೆ ಸದರಿ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ಅಗತ್ಯಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

ಅಧ್ಯಕ್ಷರು
ಸಾರ್ವಜನಿಕ ಲೆಕ್ಕ ಸ್ಥಾಯಿ ಸಮಿತಿ

ಟಿಪ್ಪಣಿಯ ಕ್ರಮ ಸಂಖ್ಯೆ.1ರಲ್ಲಿನ ಕಳೆದ ಸಾಲಿನ ಕೋಷ್ಟಕದ ಪಿ–0224ರಲ್ಲಿ ತಿಳಿಸಿರುವ ಲೆಕ್ಕಗಳ ವಿವರಗಳಲ್ಲಿನ ವೆಚ್ಚಗಳನ್ನು ಸಮಿತಿಯು ಅವಲೋಕಿಸಿದಾಗ ಅನುದಾನವು ನಿಗದಿತ ಅವಧಿಯಲ್ಲಿ ಪೂರ್ಣವಾಗಿ ಸದ್ಬಳಕೆಯಾಗದೆ ಬಾಕಿ ಉಳಿದಿರುವ ಕುರಿತು ಚರ್ಚಿಸಿ 2019–20ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–0224ರಲ್ಲಿ ಮೀಸಲಿರಿಸಿರುವ ಅನುದಾನವನ್ನು ಪೂರ್ಣವಾಗಿ ಪ್ರಸಕ್ತಸಾಲಿನಲ್ಲಿ ಸದ್ಬಳಕೆ ಮಾಡುವ ನಿಟ್ಟಿನಲ್ಲಿ ಮೀಸಲಿರಿಸಿರುವ ಅನುದಾನದ ಶೇ. ಭಾಗಶಃ ಅನುದಾನವನ್ನು ಪೌರಕಾರ್ಮಿಕರು / ಸಫಾಯಿ ಕರ್ಮಚಾರಿಗಳು / ಗ್ಯಾಂಗ್‌ಮೆನ್‌ಗಳು ಮತ್ತು ತೋಟಗಾರಿಕೆ ಮಾಲಿಗಳ ಹಾಗೂ ಪರಿಶಿಷ್ಟ ಜಾತಿ/ಪಂಗಡದ ಸಮುದಾಯದವರ ಕುಟುಂಬಗಳು ವಾಸಿಸುತ್ತಿರುವ ಪ್ರದೇಶಗಳಲ್ಲಿ ರಸ್ತೆ, ಚರಂಡಿ, ಒಳಚರಂಡಿ, ಕುಡಿಯುವ ನೀರು, ಬೀದಿ ದೀಪಗಳು, ಸಾಮೂಹಿಕ ಶೌಚಾಲಯಗಳು ಮತ್ತು ಇತರೆ ಅಭಿವೃದ್ಧಿ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ವಾರ್ಡ್ ಸಂಖ್ಯೆ 124, 133, 10 ,99, 83, 198 ಮತ್ತು ವಾರ್ಡ್ ಸಂಖ್ಯೆ.120ಕ್ಕೆ ಪ್ರತಿ ವಾರ್ಡ್‌ಗೆ ರೂ. 100.00ಲಕ್ಷಗಳಂತೆ ಹಾಗೂ ವಾರ್ಡ್ ಸಂಖ್ಯೆ: 13ಕ್ಕೆ ರೂ.150.00ಲಕ್ಷಗಳ ಅನುದಾನವನ್ನು ಸಮಿತಿಯು ಹಂಚಿಕೆ ಮಾಡಿದೆ. ಈ ಲೆಕ್ಕಶೀರ್ಷಿಕೆಯಲ್ಲಿ ಹಂಚಿಕೆ ಮಾಡಿರುವ ಅನುದಾನಕ್ಕನುಗುಣವಾಗಿ ಸ್ಥಳೀಯ ಪಾಲಿಕೆ ಸದಸ್ಯರು / ಶಾಸಕರು ಸೂಚಿಸುವ ಕಾಮಗಾರಿಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿಕೊಂಡು ವಾರ್ಡ್‌ಗಳ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಜಾಬ್‌ಕೋಡ್ ನೀಡಿ, ಪರಿಶಿಷ್ಟ ಜಾತಿ/ಪಂಗಡದ ಸಮುದಾಯದವರಿಗೆ ತುರ್ತಾಗಿ ಮೂಲ ಸೌಕರ್ಯಗಳನ್ನು ಒದಗಿಸುವ ಹಿತದೃಷ್ಟಿಯಿಂದ ಕಾಮಗಾರಿಗಳನ್ನು ಮೆ॥ ಕೆಆರ್‌ಐಡಿಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳಲು ಹಾಗೂ ಈ ಕಾಮಗಾರಿಗಳಲ್ಲಿ ಯಾವುದೇ ಲೋಪವಾಗದಂತೆ ಕಾಮಗಾರಿಗಳನ್ನು ತುರ್ತಾಗಿ ಅನುಷ್ಟಾನಗೊಳಿಸಲು ಅಗತ್ಯಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

ಪಿ–3629ರಡಿ ರೂ 100.00ಲಕ್ಷಗಳ ಅನುದಾನದಲ್ಲಿ ವಾರ್ಡ್ ಸಂಖ್ಯೆ 117 – ಶಾಂತಿನಗರ ವಾರ್ಡ್ ವ್ಯಾಪ್ತಿಯಲ್ಲಿರುವ ರುದ್ರಭೂಮಿ / ಸ್ಮಶಾನಗಳಲ್ಲಿ ವಸತಿ ಗೃಹಗಳನ್ನು ನಿರ್ಮಾಣ ಮಾಡಿ, ರುದ್ರಭೂಮಿ / ಸ್ಮಶಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ/ಪಂಗಡದವರ ವಾಸಕ್ಕಾಗಿ ನೀಡಲು ಸಮಿತಿಯು ತೀರ್ಮಾನಿಸಿತು.

2019–20ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–1938ರ ವಿಶೇಷ ಚೇತನರು ಹಾಗೂ ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳಿಗೆ ನಿಗಧಿಪಡಿಸಿರುವ ಅನುದಾನವನ್ನು ಸದ್ಬಳಕೆ ಮಾಡುವ ನಿಟ್ಟಿನಲ್ಲಿ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾರ್ಯಕ್ರಮಗಳ ಜೊತೆಗೆ 1) ವಿಕಲ ಚೇತನರು ಮಾಡಿಸಿಕೊಳ್ಳುವ ಎಲ್ಲಾ ವಿಧಧ ಕೃತಕ ಅಂಗಜೋಡಣೆಗೆ ಭರಿಸಿರುವ ವೆಚ್ಚದಲ್ಲಿ ಶೇ. 75ರಷ್ಟು ಅಥವಾ ಗರಿಷ್ಟ ರೂ. 4.00ಲಕ್ಷಗಳ ವೆಚ್ಚ ಮರುಪಾವತಿ ಮಾಡುವುದು. 2) ಅಂಧರಿಗೆ ಆಧುನಿಕ ರೀತಿಯ ಸ್ಮಾರ್ಟ್ ಸ್ಟಿಕ್ ವಿತರಣೆ 3) ಅಂದರಿಗೆ ಅನುಕೂಲವಾಗುವ ಲ್ಯಾಪ್‌ಟಾಪ್‌ಗಳ ವಿತರಣೆ, 4) ಬುದ್ದಿಮಾಂದ್ಯರನ್ನು ಪೋಷಿಸುತ್ತಿರುವ ತಂದೆ–ತಾಯಿ ಅಥವಾ ಪೋಷಕರಿಗೆ ವಾರ್ಷಿಕ ಗರಿಷ್ಟ ರೂ 50,000/–ಗಳಿಗೆ ಮೀರದಂತೆ ಆರ್ಥಿಕ ಸಹಾಯ 5) ವಿಕಲಚೇತನರು ಸ್ವಯಂ ಉದ್ಯೋಗ ಪ್ರಾರಂಭಿಸಲು ಯೋಜನಾ ವೆಚ್ಚದ ಶೇ.50ರಷ್ಟು ಅಥವಾ ಗರಿಷ್ಟ ರೂ. 1.50ಲಕ್ಷಗಳಿಗೆ ಮೀರದಂತೆ ಸಹಾಯಧನ 6) ಪಿ–1938ರಡಿಯಲ್ಲಿ "ನಮ್ಮ ಮನೆ ಯೋಜನೆ" : ಯೋಜನೆಯಡಿ ವಿಕಲ ಚೇತನರ ಅಥವಾ ಅವರ ತಂದೆ–ತಾಯಿ ರವರ ಹೆಸರಿನಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವವರು ಸ್ವಂತ ನಿವೇಶನ ಹೊಂದಿರುವವರಿಗೆ ಪ್ರತಿ ಮನೆಗೆ ರೂ 5.00ಲಕ್ಷಗಳನ್ನು ಮೀಸಲಿರಿಸಿದ್ದು 198 ವಾರ್ಡ್‌ಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಿ ಪಾಲಿಕೆಯಲ್ಲಿ ಚಾಲ್ತಿಯಲ್ಲಿರುವ ಒಂಟಿ ಮನೆಯ ಮಾರ್ಗಸೂಚಿಯಂತೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ವಲಯ ಅಪರ / ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಅಗತ್ಯ ಕ್ರಮವಹಿಸುವುದು. ಈ ಯೋಜನೆಯಲ್ಲಿ ವಾರ್ಡ್ ಸಂಖ್ಯೆ: 117, 124, 133, 13, 27, 83, 120, 99, 147, 69 ಮತ್ತು ವಾರ್ಡ್ ಸಂಖ್ಯೆ:198 ಈ ವಾರ್ಡ್‌ಗಳಿಗೆ ಪ್ರತಿ ವಾರ್ಡ್‌ಗೆ 10 ನಮ್ಮ

ಅಧ್ಯಕ್ಷರು

ಮನೆಗಳನ್ನು ಸಮಿತಿಯು ಅಧಿಕವಾಗಿ ಹಂಚಿಕೆ ಮಾಡಿದೆ ಹಾಗೂ ಲೆಕ್ಕಶೀರ್ಷಿಕೆ ಪಿ-1938ರಲ್ಲಿ ವಾರ್ಡ್ ಸಂಖ್ಯೆ 131ರಲ್ಲಿ ರೂ.300.00ಲಕ್ಷ, ವಾರ್ಡ್ ಸಂಖ್ಯೆ: 13ರಲ್ಲಿ ರೂ. 400.00ಲಕ್ಷ ವಾರ್ಡ್ ಸಂಖ್ಯೆ: 131 ರೂ.600.00ಲಕ್ಷ ಮತ್ತು ವಾರ್ಡ್ ಸಂಖ್ಯೆ 117ರಲ್ಲಿ ರೂ.200.00ಲಕ್ಷಗಳು ಮತ್ತು ವಾರ್ಡ್ ಸಂಖ್ಯೆ: 133ಕ್ಕೆ ರೂ.100.00ಲಕ್ಷಗಳ ಅನುದಾನದಲ್ಲಿ ದಿವ್ಯಾಂಗ ಚೇತನರಿಗೆ ಅನುಕೂಲ ಕಲ್ಪಿಸಲು ಮತ್ತು ವಿಶೇಷ ಸೌಲಭ್ಯಗಳ ವಿವಿದೋದ್ದೇಶ ಕಟ್ಟಡಗಳ ನಿರ್ಮಾಣ ಮಾಡಲು ಸಮಿತಿಯು ಅನುದಾನವನ್ನು ಹಂಚಿಕೆ ಮಾಡಿ ಸದರಿ ಕಟ್ಟಡ ಕಾಮಗಾರಿಗಳನ್ನು ಮೆ॥ ಕೆಆರ್‌ಐಡಿಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳಲು ಹಾಗೂ ಈ ಕಾಮಗಾರಿಗಳಲ್ಲಿ ಯಾವುದೇ ಲೋಪವಾಗದಂತೆ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ಅಗತ್ಯಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

2019-20ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-1878, ಪಿ-2652 ಪಿ-0224, ಮತ್ತು ಪಿ-1938ರ ಲೆಕ್ಕಶೀರ್ಷಿಕೆಗಳಲ್ಲಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯು ಹಂಚಿಕೆ ಮಾಡಿರುವ ವಾರ್ಡ್‌ವಾರು ಅನುದಾನದ ಕಾಮಗಾರಿಗಳಿಗೆ ಮುಖ್ಯ ಆರ್ಥಿಕ ಅಧಿಕಾರಿರವರು ಕೂಡಲೇ ಕಾಮಗಾರಿ ಸಂಕೇತಗಳನ್ನು ನೀಡುವಂತೆ ಆಯುಕ್ತರು ಅಗತ್ಯ ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

2019-20ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3620ರ ದಿವ್ಯಾಂಗ ವ್ಯಕ್ತಿಗಳಿಗೆ ತ್ರಿಚಕ್ರವಾಹನ ವಿತರಣೆ ಕಾರ್ಯಕ್ರಮದಲ್ಲಿ ವಿದ್ಯುತ್ ಚಾಲಿತ ತ್ರಿಚಕ್ರ ವಾಹನನೀಡಲು ಆದ್ಯತೆ ನೀಡಿ ಅಗತ್ಯಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

2019-20ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3622ರಲ್ಲಿ ಮೀಸಲಿರಿಸಿರುವ ದಿವ್ಯಾಂಗ ಚೇತನ ಮಕ್ಕಳ ವಿದ್ಯಾ ಸಂಸ್ಥೆಗಳಿಗೆ ಆರ್ಥಿಕ ಸಹಾಯಧನ ನೀಡುವ ಪ್ರಸ್ತಾವನೆಗಳನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಅಗತ್ಯ ಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

2019-20ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3411ರಲ್ಲಿ ಮಹಿಳಾ ಪಿಂಕ್ ಕಲ್ಯಾಣ - ಹಂಚಿಕೆ ರೂ. 10.00ಲಕ್ಷ ಪ್ರತಿ ವಾರ್ಡ್‌ಗೆ(ಮಹಿಳಾ ಕಲ್ಯಾಣ ಯೋಜನೆಗಳಿಗೆ ಮಾತ್ರ) ಮೀಸಲಿರಿಸಿರುವ ಅನುದಾನದಲ್ಲಿ ವೃತ್ತಿನಿರತ / ಸ್ವಯಂ ಉದ್ಯೋಗಿ ಮಹಿಳೆಯರಿಗೆ ಪ್ರತಿ ವಾರ್ಡ್‌ನಲ್ಲೂ ಉತ್ತಮ ಗುಣಮಟ್ಟದ ಚಾರ್ಜ್‌ಬಲ್ ಎಲೆಕ್ಟ್ರಿಕಲ್ ದ್ವಿಚಕ್ರವಾಹನವನ್ನು ವಿಶೇಷ ಆಯುಕ್ತರು(ಕಲ್ಯಾಣ) ರವರು ನಿಯಮಾನುಸಾರ ಖರೀದಿಸಿ ಪ್ರಸಕ್ತ ಸಾಲಿನಲ್ಲಿಯೇ ವಿತರಿಸಲು ಅಗತ್ಯ ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

2019-20ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3289ರ ಹಿರಿಯ ನಾಗರೀಕರಿಗೆ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಮೀಸಲಿರಿಸಿರುವ ಅನುದಾನದಲ್ಲಿ ರೂ. 500.00ಲಕ್ಷಗಳ ಪೈಕಿ 1) ರೂ.150.00ಲಕ್ಷಗಳನ್ನು "ಹಿರಿಯರ ಅಂಗಳ" ಕಾರ್ಯಕ್ರಮದಡಿ: ಹಿರಿಯ ನಾಗರೀಕರ ಸ್ನೇಹಿ, ವಿಶ್ರಾಂತಿ, ಮನರಂಜನೆಗಾಗಿ ಮೂಲ ಸೌಕರ್ಯಗಳನ್ನೊಳಗೊಂಡ ಕಟ್ಟಡಗಳನ್ನು ನಿರ್ಮಾಣಕ್ಕಾಗಿ ಅನುದಾನ ಹಂಚಿಕೆ ಮಾಡಿ ಪ್ರತಿ ಕಟ್ಟಡಕ್ಕೆ ಗರಿಷ್ಟ ರೂ.30.00ಲಕ್ಷಗಳಿಗೆ ಮೀರದಂತೆ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ ಪ್ರಸ್ತಾವನೆಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಅಗತ್ಯಕ್ರಮ ವಹಿಸುವುದು ಮತ್ತು ಸದರಿ ಕೇಂದ್ರದ ಪೀಟೋಪಕರಣ ಮತ್ತು ಇತರೆ ಮನರಂಜನ ಪರಿಕರಗಳಿಗೆ ಗರಿಷ್ಟ ರೂ.5.00ಲಕ್ಷಗಳು, ಕೇಂದ್ರದ ನಿರ್ವಹಣೆಗಾಗಿ ಕೇರ್‌ಟೇಕರ್ ಸಂಬಾವನೆ, ದಿನಪತ್ರಿಕೆ, ಕುಡಿಯುವ ನೀರು, ಡಿಟಿಹೆಚ್ ಸೇವೆ, ವಿದ್ಯುತ್ ಹಾಗೂ ಇತರೆ ನಿರ್ವಹಣೆಗಾಗಿ ಪ್ರತಿ ಮಾಹೆ ಗರಿಷ್ಟ ರೂ. 20,000/-ದಂತೆ ವಾರ್ಷಿಕ ರೂ. 2.40ಲಕ್ಷಗಳ ಮೀರದಂತೆ ಕ್ರಮ ವಹಿಸುವುದು, ಒಂದುವೇಳೆ ಪಾಲಿಕೆಯ ಕಟ್ಟಡ ಲಭ್ಯವಿದ್ದಲ್ಲಿ ಅಂತಹ ಕಟ್ಟಡಗಳ



ಅಧ್ಯಕ್ಷರು

ನವೀಕರಣ ಅವಶ್ಯಕತೆಯಿದ್ದಲ್ಲಿ ವಿವರವಾದ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸಮಿತಿಯ ಅನುಮೋದನೆ ಪಡೆಯುವುದು ಮತ್ತು ಮೇಲ್ಕಂಡಂತೆ ಇತರೆ ಮನರಂಜನ ಪರಿಕರಗಳು ಮತ್ತು ನಿರ್ವಹಣೆಯ ವೆಚ್ಚವನ್ನು ಭರಿಸುವುದು. 2) ಹಿರಿಯನಾಗರೀಕರಿಗೆ ಮಡುಚಬಹುದಾದ ವೀಲ್‌ಚೇರ್‌ಗಳ ವಿತರಣೆ ಅಗತ್ಯ ಕ್ರಮ ವಹಿಸುವಂತೆ ಸಮಿತಿಯು ತೀರ್ಮಾನಿಸಿತು.

ಟಿಪ್ಪಣಿಯಲ್ಲಿ ಕ್ರ.ಸಂ.1ರ ಕೋಷ್ಟಕದಲ್ಲಿ ವಿವರಿಸಿರುವ 2018–19ನೇ ಸಾಲಿನ ಲೆಕ್ಕಶೀರ್ಷಿಕೆಗಳಲ್ಲಿನ ಕಲ್ಯಾಣ ಕಾರ್ಯಕ್ರಮಗಳನ್ನು ಕ್ರಿಯಾ ಯೋಜನೆಯಲ್ಲಿನ ರೂಪಿಸಿರುವ ಕಾರ್ಯಕ್ರಮಗಳ ಅನುಷ್ಠಾನವು ಕಡತ ವ್ಯವಹರಣೆಗಳಿಂದ ವಿಳಂಬವಾಗಿರುವ ಹಿನ್ನೆಲೆಯಲ್ಲಿ 2019–20ನೇ ಸಾಲಿನಲ್ಲಿ ಅನುಷ್ಠಾನಗೊಳ್ಳುತ್ತಿರುವುದರಿಂದ ಸದರಿ ಕಾರ್ಯಕ್ರಮಗಳಿಗೆ 2018–19ನೇ ಸಾಲಿನ ಅನುದಾನದ ಲೆಕ್ಕದಲ್ಲಿಯೇ ವೆಚ್ಚಗಳನ್ನು ಭರಿಸಲು ಅಗತ್ಯ ಕ್ರಮ ವಹಿಸುವುದೆಂದು ಹಾಗೂ 2019–20ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಅನುಷ್ಟಾನದಲ್ಲಿ ತಾಂತ್ರಿಕ ಅಥವಾ ಸೂಕ್ತ ಕಾರಣದಿಂದ ವಿಳಂಬವಾದಲ್ಲಿ ಅಂತಹ ಪ್ರಕರಣಗಳಲ್ಲಿ ವೆಚ್ಚವಾಗದೇ ಬಾಕಿ ಉಳಿಯುವ ಅನುದಾನದ ವಿವರಗಳನ್ನು ಲೆಕ್ಕಶಾಖೆಗೆ ಕಡ್ಡಾಯವಾಗಿ ಒದಗಿಸುವುದು ಹಾಗೂ ಲೆಕ್ಕ ಶಾಖೆಯು ಸದರಿ ಮಾಹಿತಿಗಳನ್ನು ಪಡೆದು ಮುಂದಿನ ಆರ್ಥಿಕ ಸಾಲಿನ ( 2020–21 ) ಆಯವ್ಯಯದ ಪುಸ್ತಕದಲ್ಲಿ ಮುಂದುವರಿದ ಕಾಮಗಾರಿ/ಕಾರ್ಯಕ್ರಮಗಳು ಎಂದು ಕಡ್ಡಾಯವಾಗಿ ಬಾಕಿ ಅನುದಾನದ ವಿವರಗಳನ್ನು ನಮೂದಿಸಲು ವಿಶೇಷ ಆಯುಕ್ತರು (ಕಲ್ಯಾಣ) / (ಹಣಕಾಸು) ರವರು ಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

2019–20ನೇ ಸಾಲಿನ ಆಯವ್ಯಯದಲ್ಲಿ ಕಲ್ಯಾಣ ಇಲಾಖೆಯ ಅಡಿಯಲ್ಲಿ ಮೀಸಲಿರಿಸಿರುವ ಪರಿಶಿಷ್ಟ ಜಾತಿ/ ಪಂಗಡ, ಹಿಂದುಳಿದ ವರ್ಗ, ಆರ್ಥಿಕ ದುರ್ಬಲ ವರ್ಗ, ಮಹಿಳಾ ಕಲ್ಯಾಣ, ದಿವ್ಯಾಂಗ ಚೇತನರು, ಹಿರಿಯ ನಾಗರೀಕರ ಸೌಲಭ್ಯ, ಟ್ರಾನ್ಸ್‌ಜೆಂಡರ್, ಸಮುದಾಯದ ಪ್ರದೇಶಗಳ ಮೂಲಸೌಕರ್ಯಗಳು ಹಾಗೂ ಇತರೆ ಲೆಕ್ಕ ಶೀರ್ಷಿಕೆಗಳಲ್ಲಿ ಮೀಸಲಿರಿಸಿರುವ ಅನುದಾನಗಳನ್ನು ಬಳಕೆಮಾಡಿಕೊಂಡು ಅನುಷ್ಠಾನಗೊಳಿಸಿರುವ ಎಲ್ಲಾ ವೆಚ್ಚಗಳನ್ನು ಪ್ರತ್ಯೇಕ ಜೇಷ್ಠತೆಗೆ ಪರಿಗಣಿಸಿ ಹಣಬಿಡುಗಡೆ ಮಾಡಲು ಪಾಲಿಕೆಯ ಮುಖ್ಯ ಲೆಕ್ಕಾಧಿಕಾರಿಗಳು ಅಗತ್ಯ ಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

2019–20ನೇ ಸಾಲಿನ ಆಯವ್ಯಯದ ಪುಸ್ತಕದ ಪುಟ ಸಂಖ್ಯೆ 129ರಲ್ಲಿ ಪಿ–3592 ರಲ್ಲಿ ವಾರ್ಡ್ ಸಂಖ್ಯೆ.121ಕ್ಕೆ ವಿಶೇಷ ಅಭಿವೃದ್ಧಿ ಕಾಮಗಾರಿಗಳಿಗಾಗಿ ರೂ.500.00ಲಕ್ಷಗಳನ್ನು ಮೀಸಲಿಟ್ಟಿದ್ದು ಈ ಅನುದಾನದಲ್ಲಿ ರೂ. 150.00ಲಕ್ಷಗಳನ್ನು ವಾರ್ಡ್ ಸಂಖ್ಯೆ.121– ವಾರ್ಡ್‌ನಲ್ಲಿನ ಫಲಾನುಭವಿಗಳಿಗೆ ಲ್ಯಾಪ್‌ಟಾಪ್ ಮತ್ತು ಹೊಲಿಗೆ ಯಂತ್ರಗಳನ್ನು ವಿತರಿಸಲು ಅಧ್ಯಕ್ಷರು, ತೋಟಗಾರಿಗೆ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸದಸ್ಯರು ವಾರ್ಡ್ ಸಂಖ್ಯೆ 121ರ ಕೋರಿಕೆ ಮೇರೆಗೆ ಸದರಿ ಕಲ್ಯಾಣ ಕಾರ್ಯಕ್ರಮದ ವಿಷಯವನ್ನು ಅನುಷ್ಠಾನಗೊಳಿಸಲು ಸಮಿತಿಯು ಅನುಮೋದನೆ ನೀಡಿದೆ ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಪ್ರತ್ಯೇಕವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.

ಉಳಿದಂತೆ ಮೇಲ್ಕಂಡ ಅಂಶಗಳೊಂದಿಗೆ 2019–20ನೇ ಸಾಲಿನ ಆಯವ್ಯಯದಲ್ಲಿ ಕಲ್ಯಾಣ ಇಲಾಖೆಯ ವಿವಿಧ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ಮೀಸಲಿರಿಸಿರುವ ಪರಿಶಿಷ್ಟ ಜಾತಿ/ ಪಂಗಡ, ಹಿಂದುಳಿದ ವರ್ಗ, ಆರ್ಥಿಕ ದುರ್ಬಲ ವರ್ಗ, ಮಹಿಳಾ ಕಲ್ಯಾಣ, ದಿವ್ಯಾಂಗ ಚೇತನರು, ಹಿರಿಯ ನಾಗರೀಕರ ಸೌಲಭ್ಯ, ಟ್ರಾನ್ಸ್‌ಜೆಂಡರ್ ಕಾರ್ಯಕ್ರಮಗಳ ಕುರಿತಂತೆ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವಿಷಯಗಳನ್ನು ಸಮಿತಿಯು ಅನುಮೋದಿಸಿದೆ. ಹಾಗೂ ಸಮುದಾಯದ ಪ್ರದೇಶಗಳ

Sowmya P
ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ವಿಷಯದ ಸಂಖ್ಯೆ: ಸಾಸ್ಯಾಸ್ಥಾಸ/ಪೀಆರ್/ 34/2019-20

ಅಭಿವೃದ್ಧಿ ಕಾಮಗಾರಿಗಳು ಹಾಗೂ ಮೂಲಸೌಕರ್ಯಗಳು ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಪ್ರಸಕ್ತ ಸಾಲಿನಲ್ಲಿಯೇ ಅನುಷ್ಠಾನಗೊಳಿಸಲು ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದು ಎಂದು ಸಮಿತಿಯು ತೀರ್ಮಾನಿಸಿ ನಿರ್ಣಯಿಸಿತು.

ಅಧ್ಯಕ್ಷರು

ಸಾಸ್ಯಾಸ್ಥಾಸ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

| ಕ್ರಮ ಸಂ. | ಸದಸ್ಯರ ಹೆಸರುಗಳು | | |
|---|---|---|---|
| 1. | ಶ್ರೀಮತಿ. ಪಿ. ಸೌಮ್ಯ | ಅಧ್ಯಕ್ಷರು | |
| 2. | ಶ್ರೀಮತಿ. ಮಹಾಲಕ್ಷ್ಮಿ. ಹೆಚ್ ರವೀಂದ್ರ | ಸದಸ್ಯರು | |
| 3. | ಶ್ರೀ. ಆನಂದ್. ಸಿ.ಹೊಸೂರ್ | ಸದಸ್ಯರು | |
| 4. | ಶ್ರೀ. ಲೋಕೇಶ್.ಎನ್ | ಸದಸ್ಯರು | |
| 5. | ಶ್ರೀ. ಎ.ಕೋದಂಡರೆಡ್ಡಿ | ಸದಸ್ಯರು | |
| 6. | ಶ್ರೀ. ಎಸ್. ಮುನಿಸ್ವಾಮಿ | ಸದಸ್ಯರು | |
| 7. | ಶ್ರೀ. ಡಿ. ಪ್ರಮೋದ್ | ಸದಸ್ಯರು | |
| 8. | ಶ್ರೀ. ಜಿ. ಕೃಷ್ಣಮೂರ್ತಿ | ಸದಸ್ಯರು | |
| 9. | ಶ್ರೀಮತಿ. ಮಂಜುಳ | ಸದಸ್ಯರು | |
| 10. | ಶ್ರೀಮತಿ. ಮಂಜುಳ.ಎನ್.ಸ್ವಾಮಿ | ಸದಸ್ಯರು | |
| 11. | ಶ್ರೀ. ಆರ್ಯ ಶ್ರೀನಿವಾಸ್ | ಸದಸ್ಯರು | |

ಆಯುಕ್ತರು ರವರ ಕಚೇರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
E-mail: welfarebbmp@gmail.com

ಕೇಂದ್ರ ಕಛೇರಿ ಅನೆಕ್ಸ್-2,
ಹಡ್ಸನ್ ಸರ್ಕಲ್ ಬೆಂಗಳೂರು-02

ಸಂಖ್ಯೆ:ಕ.ಅ/ಕೇಂ.ಕ/ಪಿ.ಆರ್/518/2019-20 ದಿನಾಂಕ:30-07-2019

# ಕಛೇರಿ ಆದೇಶ

ವಿಷಯ: 2019-20ನೇ ಸಾಲಿನ ಕಲ್ಯಾಣ ವಿಭಾಗದ ಅನುಧಾನದ ಹಂಚಿಕೆ ಮತ್ತು ಕ್ರಿಯಾಯೋಜನೆಯ ಅನುಮೋದನೆ ಕುರಿತು.

ಉಲ್ಲೇಖ:
1 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪರಿಷ್ಕೃತ ಆಯವ್ಯಯ ಅಂದಾಜುಗಳು 2018-19 ಮತ್ತು ಆಯವ್ಯಯ ಅಂದಾಜುಗಳು 2019-20.

2 ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ವಿಷಯದ ಸಂಖ್ಯೆ:ತೆಆಸ್ಥಾಸ/144/18-19 ದಿನಾಂಕ:13/02/2019.

3 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಯವ್ಯಯ ಸಭೆ ವಿಷಯದ ಸಂಖ್ಯೆ:286/18-19 ದಿನಾಂಕ:23-02-2019 ರಂದು ಅನುಮೋದಿಸಿ ತಿದ್ದುಪಡಿ ಮಾಡಿ ತೀರ್ಮಾನಿಸಿರುವಂತೆ.

4 ಸರ್ಕಾರದ ಆದೇಶ ಸಂಖ್ಯೆ:ನ.ಆ.ಇ./476/ಎಂಎನ್‌ವೈ/2018 (ಭಾ-1), ದಿನಾಂಕ:22-05-2019 ರಲ್ಲಿ ಅನುಮೋದಿಸಿರುವಂತೆ.

5 ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ವಿಷಯದ ಸಂಖ್ಯೆ:ತೆಆಸ್ಥಾಸ/001/2019-20, ದಿ:31-05-2019.

6 ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಸುತ್ತೋಲೆ ಸಂಖ್ಯೆ:ನಅಇ/20/ಪಿಎನ್‌ಜಿ/2015 ದಿನಾಂಕ:-16/01/2019

7 ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಸುತ್ತೋಲೆ ಸಂಖ್ಯೆ:ನಅಇ/43/ಪಿಎನ್‌ಜಿ/2015 ದಿನಾಂಕ:-29/03/2016

8 ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಸುತ್ತೋಲೆ ಸಂಖ್ಯೆ:ನಅಇ/39/ಪಿಎನ್‌ಜಿ/2015 ದಿನಾಂಕ:-09/10/2015

9 ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ವಿಷಯದ ಸಂಖ್ಯೆ:ತೆಆಸ್ಥಾಸ/001/2019-20, ದಿ:31-05-2019 ರಂದು ಸರ್ಕಾರದ ಆದೇಶದಂತೆ ಪರಿಷ್ಕರಿಸಿ ಅನುಮೋದಿಸಿರುವಂತೆ

10 ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ: ಸಾನ್ಯಾಸ್ಥಾಸ/ಪಿಆರ್/34/2019-20 ದಿನಾಂಕ. 18.07.2019.

* * * * * *

## 2019-20ನೇ ಸಾಲಿನ ಆಯವ್ಯಯ ಅಂದಾಜುಗಳ ಪುಸ್ತಕದಲ್ಲಿ ಕಲ್ಯಾಣ ವಿಭಾಗದ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ನಿಗದಿಪಡಿಸಿರುವ ಅನುಧಾನಗಳ ವಿವರಗಳು

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶಗಳನ್ವಯ 2019-20ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯವು ಅನುಮೋದನೆಗೊಂಡಿರುತ್ತದೆ. 2019-20ನೇ ಸಾಲಿನ ಚಾಲ್ತಿ ಅನುದಾನದ ವಿವರಗಳು ಈ ಕೆಳಕಂಡಂತಿದೆ.

12

| ಕ್ರಸಂ | ವರ್ಗ | (ರೂ ಲ |
|---|---|---|
| 1 | ಶೇ.24.10%ರ ಅನುದಾನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳು | 379 |
| 2 | ಶೇ 7.25% ರ ಅನುದಾನದಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳು | 103 |
| 3 | ಆರ್ಥಿಕವಾಗಿ ಹಿಂದುಳಿದ ವರ್ಗಗದವರ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳು | 112 |
| 4 | ಸಾಮಾನ್ಯ ವರ್ಗದ ಕಲ್ಯಾಣ ಕಾರ್ಯಕ್ರಮಗಳು | 190 |
| 5 | ವಿಶೇಷ ಚೇತನರ ಕಲ್ಯಾಣ ಕಾರ್ಯಕ್ರಮಗಳು | 867 |
| 6 | ಮಹಿಳಾ ವರ್ಗದವರ ಕಲ್ಯಾಣ ಕಾರ್ಯಕ್ರಮ | 8505 |
| 7 | ಹಣಕಾಸು ಸಹಾಯ (ಅನುದಾನಗಳು–Grant in Aid) | 6449.00 |
| | ಒಟ್ಟು | 74919.00 |

1. 2018–19ನೇ ಸಾಲಿನಲ್ಲಿ ಖರ್ಚಾಗದೇ ಉಳಿದಿರುವ ಅರ್ಹ ಚಾಲ್ತಿ ಅನುದಾನವನ್ನು 2019–20ನೇ ಸಾಲಿಗೆ ನಿಯಮಾವಳಿಯಂತೆ ಮುಂದುವರೆಸುವ ಬಗ್ಗೆ

1.1 2018–19ನೇ ಸಾಲಿನ ಅನುಧಾನದ ಹಂಚಿಕೆ ಮತ್ತು ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳ ಕ್ರಿಯಾಯೋಜನೆಗೆ ದಿನಾಂಕ:25–10–2018 ರಂದು ಮಾನ್ಯ ಆಯುಕ್ತರವರ ಅನುಮೋದನೆಯಾಗಿದ್ದು, ಈ ಆಧಾರದ ಮೇಲೆ 2018–19ನೇ ಸಾಲಿನ ಕ್ರಿಯಾಯೋಜನೆಯಲ್ಲಿ ನಿಗಧಿಪಡಿಸಿರುವ ಅನುದಾನಕ್ಕೆ ಅನುಗುಣವಾಗಿ ವಲಯ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಹಾಗೂ ಟೆಂಡರ್ ಪ್ರಕ್ರಿಯೆಗಳನ್ನು ಸಿದ್ದತೆ ಮಾಡಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ರೀತಿಯ ಕ್ರಮವಹಿಸಲಾಗುತ್ತಿದ್ದು 2018–19ನೇ ಸಾಲಿನ ಆರ್ಥಿಕ ವರ್ಷ ಈಗಾಗಲೇ ಮುಕ್ತಾಯಗೊಂಡಿದ್ದು ಕಾರ್ಯಕ್ರಮಗಳು ಅನುಷ್ಠಾನದ ಹಂತದಲ್ಲಿರುತ್ತದೆ.

1.2 ಮೇಲ್ಕಂಡಂತೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮತ್ತು ಮಾನ್ಯ ಆಯುಕ್ತರ ಅದೇಶದಂತೆ 2018–19ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕೇಂದ್ರ ಕಛೇರಿ ಹಾಗೂ ವಲಯ ಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿದ್ದು, ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಸರಬರಾಜು ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಾಗಿದೆ. ಅಲ್ಲದೇ ನಿಯಮಾನುಸಾರ ಮಾರ್ಗಸೂಚಿಯನ್ವಯ ಟೆಂಡರ್ ರಹಿತ ಕಾರ್ಯಕ್ರಮಗಳಾದ ಶಾಲಾ/ಕಾಲೇಜು ಶುಲ್ಕಗಳ ಮರುಪಾವತಿ ನೀಡುವ ಕಾರ್ಯಕ್ರಮಗಳಿಗೂ ಸಹಾ ವಲಯ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಸೌಲಭ್ಯಗಳನ್ನು ವಿತರಿಸುವ ಹಂತದಲ್ಲಿರುತ್ತದೆ. ಆದುದರಿಂದ ಈ ಎಲ್ಲಾ ಕಾರ್ಯಕ್ರಮಗಳನ್ನು 2018–19ನೇ ಸಾಲಿನ ಕ್ರಿಯಾಯೋಜನೆಯಲ್ಲಿನ ಅವಕಾಶಗಳು, ಕಾರ್ಯಕ್ರಮ /ಅನುದಾನದ ಲಭ್ಯತೆಯ ಮೇರೆಗೆ 2019–20ನೇ ಸಾಲಿಗೆ ಮುಂದುವರೆಸಿಕೊಂಡು, ಸದರಿ ಕಾರ್ಯಕ್ರಮಗಳಿಗೆ 2019–20ನೇ ಸಾಲಿಗೆ ವೆಚ್ಚ ಭರಿಸಲು ಅನುಮೋದನೆ ನೀಡಲಾಗಿದೆ.

2. 2019–20 ನೇ ಸಾಲಿನ ಆಯವ್ಯಯದ ಚಾಲ್ತಿ ಅನುದಾನಗಳಿಗೆ ಸಂಬಂಧಿಸಿದಂತೆ 24.10% ಎಸ್.ಸಿ/ಎಸ್.ಟಿ ಕಲ್ಯಾಣ ಯೋಜನೆಗಳಡಿ ಮೂಲಭೂತ ಸೌಕರ್ಯಗಳು (ವಯಕ್ತಿಕ ಕಾರ್ಯಕ್ರಮಗಳು)

2.1 ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/20/ಪಿಎನ್‌ಜಿ/2015 ದಿನಾಂಕ:–16/01/2019ರಲ್ಲಿ ಶೇ.24.10%ರ ಅನುದಾನವನ್ನು ಪರಿಶಿಷ್ಟ ಜಾತಿಯವರಿಗೆ ಶೇ.17.15%ರಷ್ಟು ಹಾಗೂ ಪರಿಶಿಷ್ಟ ಪಂಗಡದವರಿಗೆ ಶೇ.6.95% ರಂತೆ ಹಂಚಿಕೆ ಮಾಡಲು ಸೂಚಿಸಿದ್ದು, ಅದರಂತೆ 2019–20ನೇ ಸಾಲಿನ ಕಲ್ಯಾಣ

ಕಾರ್ಯಕ್ರಮ/ಕಾಮಗಾರಿ ಯೋಜನೆಗಳಿಗೆ ನಿಗಧಿಪಡಿಸಿರುವ ಅನುದಾನವನ್ನು ಹಂಚಿಕೆ ಮಾಡಿಕೊಂಡು ಅನುಷ್ಠಾನಗೊಳಿಸುವುದು.

2.2 ಈ ಹಿಂದಿನ ಸಾಲುಗಳಲ್ಲಿ ಶೇ.24.10%ರ ಅನುದಾನವನ್ನು ಆಯಾ ವಾರ್ಡ್‌ಗಳಲ್ಲಿ ವಾಸವಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಯ ಅನುಗುಣವಾಗಿ ಹಂಚಿಕೆ ಮಾಡಲಾಗಿರುತ್ತದೆ. ಅದರಂತೆ 2019-20ನೇ ಸಾಲಿನಲ್ಲಿಯೂ ಸಹ ಶೇ.24.10%ರಡಿ ವಿವಿಧ ಲೆಕ್ಕಶೀರ್ಷಿಕೆಯಡಿ ಕಾಯ್ದಿರಿಸಿರುವ ಅನುದಾನವನ್ನು ಪಾಲಿಕೆ ವ್ಯಾಪ್ತಿಯ ಎಲ್ಲಾ ಎಂಟು ವಲಯಗಳ 198 ವಾರ್ಡ್‌ಗಳಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಗೆ ಅನುಗುಣವಾಗಿ, 2019-20ನೇ ಸಾಲಿನ ಆಯವ್ಯಯ ಪುಸ್ತಕದಲ್ಲಿ ಹಂಚಿಕೆಯಾದಂತೆ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ನಿರ್ಣಯ ದಂತೆ ಹಂಚಿಕೆ ಮಾಡಲಾಗಿದೆ.

2.3 ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 2011ರ SECC ಜನಗಣತಿಯ ವರದಿಯನ್ನು 2015 ನೇ ಸಾಲಿನಲ್ಲಿ ಲೋಕಾರ್ಪಣೆ ಮಾಡಲಾಗಿದ್ದು, ಸದರಿ ವರದಿಯನ್ವಯ ಪಾಲಿಕೆಯ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಯ ಅನುಗುಣವಾಗಿ 2019-20ನೇ ಸಾಲಿನ ಶೇ.24.10%ರ ಅನುಧಾನದಡಿಯಲ್ಲಿ ಕಲ್ಯಾಣ ಕಾರ್ಯಕ್ರಮಗಳ ಚಾಲ್ತಿ ಅನುದಾನವನ್ನು ವಲಯವಾರು ಹಂಚಿಕೆ ಮಾಡಿರುವ ವಿವರವನ್ನು ಅನುಬಂಧ-01 ರಲ್ಲಿ ಲಗತ್ತಿಸಿದೆ.

## ವಯಕ್ತಿಕ ಸೌಲಭ್ಯಗಳ ಕಲ್ಯಾಣ ಕಾರ್ಯಕ್ರಮಗಳು

ಪಿ-0224ರಲ್ಲಿ ತಿಳಿಸಿರುವ ಲೆಕ್ಕಗಳ ವಿವರಗಳಲ್ಲಿನ ವೆಚ್ಚಗಳನ್ನು ಸಮಿತಿಯು ಅವಲೋಕಿಸಿದಾಗ ಅನುದಾನವು ನಿಗಧಿತ ಅವಧಿಯಲ್ಲಿ ಪೂರ್ಣವಾಗಿ ಸದ್ಬಳಕೆಯಾಗದೆ ಬಾಕಿ ಉಳಿದಿರುವ ಕುರಿತು ಚರ್ಚಿಸಿ 2019-20ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-0224ರಲ್ಲಿ ಮೀಸಲಿರಿಸಿರುವ ಅನುದಾನವನ್ನು ಪೂರ್ಣವಾಗಿ ಪ್ರಸಕ್ತಸಾಲಿನಲ್ಲಿ ಸದ್ಬಳಕೆ ಮಾಡುವ ನಿಟ್ಟಿನಲ್ಲಿ ಮೀಸಲಿರಿಸಿರುವ ಅನುದಾನದ ಪೈಕಿ ಭಾಗಶಃ ಅನುದಾನವನ್ನು ಪೌರಕಾರ್ಮಿಕರು / ಸಫಾಯಿ ಕರ್ಮಚಾರಿಗಳು / ಗ್ಯಾಂಗ್‌ಮೆನ್‌ಗಳು ಮತ್ತು ತೋಟಗಾರಿಕೆ ಮಾಲಿಗಳ ಹಾಗೂ ಪರಿಶಿಷ್ಟ ಜಾತಿ/ಪಂಗಡದ ಸಮುದಾಯದವರ ಕುಟುಂಬಗಳು ವಾಸಿಸುತ್ತಿರುವ ಪ್ರದೇಶಗಳಲ್ಲಿ ರಸ್ತೆ, ಚರಂಡಿ, ಒಳಚರಂಡಿ, ಕುಡಿಯುವ ನೀರು, ಬೀದಿ ದೀಪಗಳು, ಸಾಮೂಹಿಕ ಶೌಚಾಲಯಗಳು ಮತ್ತು ಇತರೆ ಅಭಿವೃದ್ಧಿ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ವಾರ್ಡ್ ಸಂಖ್ಯೆ 124, 133, 10 ,99, 83, 198 ಮತ್ತು ವಾರ್ಡ್ ಸಂಖ್ಯೆ.120ಕ್ಕೆ ಪ್ರತಿ ವಾರ್ಡ್‌ಗೆ ರೂ. 100.00ಲಕ್ಷಗಳಂತೆ ಹಾಗೂ ವಾರ್ಡ್ ಸಂಖ್ಯೆ: 13ಕ್ಕೆ ರೂ.150.00ಲಕ್ಷಗಳ ಅನುದಾನವನ್ನು ಸಮಿತಿಯು ಹಂಚಿಕೆ ಮಾಡಿದೆ. ಈ ಲೆಕ್ಕಶೀರ್ಷಿಕೆಯಲ್ಲಿ ಹಂಚಿಕೆ ಮಾಡಿರುವ ಅನುದಾನಕ್ಕನುಗುಣವಾಗಿ ಸ್ಥಳೀಯ ಪಾಲಿಕೆ ಸದಸ್ಯರು / ಶಾಸಕರು ಸೂಚಿಸುವ ಕಾಮಗಾರಿಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿಕೊಂಡು ವಾರ್ಡ್‌ಗಳ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಜಾಬ್‌ಕೋಡ್ ನೀಡಿ, ಪರಿಶಿಷ್ಟ ಜಾತಿ/ಪಂಗಡದ ಸಮುದಾಯದವರಿಗೆ ತುರ್ತಾಗಿ ಮೂಲ ಸೌಕರ್ಯಗಳನ್ನು ಒದಗಿಸುವ ಹಿತದೃಷ್ಟಿಯಿಂದ ಕಾಮಗಾರಿಗಳನ್ನು ಮೆ॥ ಕೆಆರ್‌ಐಡಿಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳಲು ಹಾಗೂ ಈ ಕಾಮಗಾರಿಗಳಲ್ಲಿ ಯಾವುದೇ ಲೋಪವಾಗದಂತೆ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸುವುದು ಹಾಗೂ ಉಳಿದ ರೂ.650.00ಲಕ್ಷಗಳ ಅನುದಾನವನ್ನು ಪೌರಕಾರ್ಮಿಕರ, ಗ್ಯಾಂಗ್‌ಮೆನ್‌ಗಳ ಮತ್ತು ತೋಟಗಾರಿಕೆ ಮಾಲಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲು ಆಯವ್ಯಯ ಪುಸ್ತಕದಲ್ಲಿ ನಿಗಧಿಪಡಿಸಿದ್ದು, ಪಾಲಿಕೆಯ ಎಲ್ಲಾ ಕಲ್ಯಾಣ ಕಾರ್ಯಕ್ರಮಗಳಡಿ ಸೌಲಭ್ಯಗಳನ್ನು ಪಡೆಯಲು ಅನುಬಂಧ-03ರಲ್ಲಿ ಲಗತ್ತಿಸಿದೆ.

2.4 ಪಿ-ಕೋಡ್ 3313ರ ಅಡಿಯಲ್ಲಿ ರೂ.500.00 ಲಕ್ಷಗಳ ಚಾಲ್ತಿ ಅನುದಾನವನ್ನು ಪರಿಶಿಷ್ಟ ಜಾತಿ/ಪಂಗಡದ ಪೌರ ಕಾರ್ಮಿಕರು, ಡಿ ಗ್ರೂಪ್ ನೌಕರರು ಹಾಗೂ ಚಾಲಕ ನೌಕರರಿಗೆ (ಖಾಯಂ ಹಾಗೂ ಹೊರ ಗುತ್ತಿಗೆ ನೌಕರರು) ಸಹಾಯ ಧನ ನೀಡಲು ಆಯವ್ಯಯ ಪುಸ್ತಕದಲ್ಲಿ

1D

ನಿಗಧಿಪಡಿಸಿದ್ದು, ಪಾಲಿಕೆಯ ಎಲ್ಲಾ ಕಲ್ಯಾಣ ಕಾರ್ಯಕ್ರಮಗಳಡಿ ಅನುಬಂಧ ನಿಗಧಿಪಡಿಸಿರುವ ಸೌಲಭ್ಯಗಳನ್ನು ಪಡೆಯುವುದು.

2.5 ಪಿ-ಕೋಡ್ 3407ರ ಅಡಿಯಲ್ಲಿ ರೂ.1000.00 ಲಕ್ಷಗಳ ಚಾಲ್ತಿ ಅನುದಾನವನ್ನು ಪೌರಕಾರ್ಮಿಕ ಮಧ್ಯಾಹ್ನದ ಬಿಸಿಯೂಟ ನೀಡುವ ಕಾರ್ಯಕ್ರಮವನ್ನು ಆಯವ್ಯಯ ಪುಸ್ತಕದಲ್ಲಿ ನಿಗಧಿಪಡಿಸಿದ್ದು, ವಿಶೇಷ ಆಯುಕ್ತರು (ಆರೋಗ್ಯ) ರವರ ವಿಭಾಗದಿಂದ ಮಾರ್ಗಸೂಚಿಯನ್ನು ಸಿದ್ದಪಡಿಸಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

2.6ಪಿ-ಕೋಡ್ 3408ರ ಅಡಿಯಲ್ಲಿ ರೂ.500.00 ಲಕ್ಷಗಳ ಚಾಲ್ತಿ ಅನುದಾನವನ್ನು ಪೌರಕಾರ್ಮಿಕರಿಗೆ ಸುರಕ್ಷಾ ಸಲಕರಣೆಗಳನ್ನು ನೀಡುವ ಕಾರ್ಯಕ್ರಮವನ್ನು ಆಯವ್ಯಯ ಪುಸ್ತಕದಲ್ಲಿ ನಿಗಧಿಪಡಿಸಿದ್ದು, ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ವಿಭಾಗದಿಂದ ಮಾರ್ಗಸೂಚಿಯನ್ನು ಸಿದ್ದಪಡಿಸಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

2.7ಪಿ-ಕೋಡ್ 2020ರ ಅಡಿಯಲ್ಲಿ ರೂ.700.00 ಲಕ್ಷಗಳ ಚಾಲ್ತಿ ಅನುದಾನವನ್ನು ವ್ಯಕ್ತಿಗತ ಸೌಲಭ್ಯಗಳಿಗೆ ಸಹಾಯಧನ ನೀಡಲು ಆಯವ್ಯಯ ಪುಸ್ತಕದಲ್ಲಿ ನಿಗಧಿಪಡಿಸಿದ್ದು, ಅನುದಾನವನ್ನು 198 ವಾರ್ಡ್:ಗಳಿಗೆ ವಾರ್ಡ್‌ವಾರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆ ಅನುಗುಣವಾಗಿ ಹಂಚಿಕೆಯಾದ ಅನುದಾನದ ವಿವರವನ್ನು ಅನುಬಂಧ-1ರಲ್ಲಿ. ಹಾಗೂ ~~ನಿಗಧಿಪಡಿಸಿರುವ ಕಾರ್ಯಕ್ರಮಗಳನ್ನು ಅನುಬಂಧ-03ರ~~ಲ್ಲಿ ನಮೋದಿಸಿದೆ.

2.8ಪಿ-ಕೋಡ್ 2022ರ ಅಡಿಯಲ್ಲಿ ರೂ.500.00 ಲಕ್ಷಗಳ ಚಾಲ್ತಿ ಅನುದಾನವನ್ನು ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳಿಗೆ ನಿಗಧಿಪಡಿಸಲಾಗಿರುತ್ತದೆ. ಸದರಿ ಅನುದಾನವನ್ನು 198 ವಾರ್ಡ್‌ಗಳಿಗೆ ವಾರ್ಡ್‌ವಾರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆ ಅನುಗುಣವಾಗಿ ಹಂಚಿಕೆಯಾದ ಅನುದಾನದ ವಿವರವನ್ನು ಅನುಬಂಧ-1ರಲ್ಲಿ ಹಾಗೂ ನಿಗಧಿಪಡಿಸಿರುವ ಕಾರ್ಯಕ್ರಮಗಳನ್ನು ಅನುಬಂಧ-2ರಲ್ಲಿ ನಮೋದಿಸಿದೆ.

2.9ಪಿ-ಕೋಡ್ 2023ರ ಅಡಿಯಲ್ಲಿ ರೂ.300.00 ಲಕ್ಷಗಳ ಚಾಲ್ತಿ ಅನುದಾನವನ್ನು ಇತರೆ ಕಾರ್ಯಕ್ರಮಗಳು (ವ್ಯಕ್ತಿಗತ ಹಾಗೂ ಸಮುದಾಯ) ಕಾರ್ಯಕ್ರಮಗಳಿಗೆ ನಿಗಧಿಪಡಿಸಲಾಗಿರುತ್ತದೆ. ಸದರಿ ಅನುದಾನವನ್ನು 198 ವಾರ್ಡ್‌ಗಳಿಗೆ ವಾರ್ಡ್‌ವಾರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆ ಅನುಗುಣವಾಗಿ ಹಂಚಿಕೆಯಾದ ಅನುದಾನದ ವಿವರವನ್ನು ಅನುಬಂಧ-1ರಲ್ಲಿ ತಿಳಿಸಿದೆ.

## <u>ವಯಕ್ತಿಕ ಸೌಲಭ್ಯಗಳ ಕಾಮಗಾರಿ ಕಾರ್ಯಕ್ರಮಗಳು</u>

2.10 ಪಾಲಿಕೆ ವತಿಯಿಂದ ಕೊಳಚೆ ನಿರ್ಮೂಲನಾ ಮಂಡಳಿಗೆ ವೈಯುಕ್ತಿಕ ಮನೆ ನಿರ್ಮಾಣಕ್ಕಾಗಿ ಹೊಂದಾಣಿಕೆ ಮೊತ್ತ:

"ನಗರ ಪ್ರದೇಶದಲ್ಲಿನ ಕಡು ಬಡವರಿಗೆ ಮೂಲಭೂತ ಸೌಕರ್ಯಗಳು" ಕಾರ್ಯಕ್ರಮವನ್ನು 2019-20ನೇ ಸಾಲಿನ ಆಯವ್ಯಯ ಪುಸ್ತಕದಲ್ಲಿ ಪಿ-ಕೋಡ್:3149 ರಲ್ಲಿ ರೂ.1200.00 ಲಕ್ಷಗಳ ಅನುದಾನವನ್ನು ಪಾಲಿಕೆ ವತಿಯಿಂದ ಕೊಳಚೆ ನಿರ್ಮೂಲನಾ ಮಂಡಳಿಗೆ ವೈಯುಕ್ತಿಕ ಮನೆ ನಿರ್ಮಾಣಕ್ಕಾಗಿ ಹೊಂದಾಣಿಕೆ ಮೊತ್ತದ ಅನುದಾನವನ್ನು ಕಲ್ಯಾಣ ಕಾರ್ಯಕ್ರಮದ ಅಡಿಯಲ್ಲಿ ನಮೂದಿಸಿರುವುದರಿಂದ, ಸದರಿ ಕಾರ್ಯಕ್ರಮವನ್ನು ನಿಯಮಾನುಸಾರ ರೂಪುರೇಷೆ ಹಾಗೂ ಮಾರ್ಗಸೂಚಿಗಳನ್ನು ಸಿದ್ದಪಡಿಸಿಕೊಂಡು ಮತ್ತು ಅನುದಾನ ಹಂಚಿಕೆ ಹಾಗೂ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಕಾಮಗಾರಿ ವಿಭಾಗದವರು ಪ್ರಧಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಖಾಂತರ ಅನುಷ್ಠಾನಗೊಳಿಸುವುದು.

ನಿರ್ಮಾಣಕ್ಕೆ ಸಂಬಂಧಿಸಿದಂತೆ ಅರ್ಹ ಫಲಾನುಭವಿಗಳ ಅಗತ್ಯ ದಾಖಲೆಗಳೊಂದಿಗೆ ವಾರ್ಡ್‌ಸಮಿತಿಯ ಅನುಮೋದನೆ ಪಡೆದು ನಿಯಮಾನುಸಾರ ಜಾಬ್ ಸಂಖ್ಯೆ ನೀಡಿ ವಲಯ ಅಪರ/ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರ ಹಂತದಲ್ಲಿ ನಿಗಧಿತ ಅವಧಿಯಲ್ಲಿಯೇ ಕಾರ್ಯಕ್ರಮ ಅನುಷ್ಠಾನಗೊಳಿಸುವುದು, ಒಂದುವೇಳೆ ವಾರ್ಡ್‌ಗೆ ನಿಗಧಿಪಡಿಸಿರುವ ಸಂಖ್ಯೆಗೆ ಅನುಗುಣವಾಗಿ ಒಂಟಿಮನೆಗಳ ಫಲಾನುಭವಿಗಳು ಲಭ್ಯವಿಲ್ಲದಿದ್ದಲ್ಲಿ ಪರಿಶೀಲಿಸಿಕೊಂಡು ಅವಶ್ಯಕತೆಯಿರುವ ಇತರೆ ವಾರ್ಡ್‌ಗಳಿಗೆ ವಲಯ ಅಪರ/ಜಂಟಿ ಆಯುಕ್ತರ ಹಂತದಲ್ಲಿಯೇ ತೀರ್ಮಾನಿಸಿ ಉಪಯೋಗಿಸಿಕೊಳ್ಳಲು ಅಗತ್ಯ ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿದ್ದು ವಲಯ ಹಂತದಲ್ಲಿ ಅನುಷ್ಠಾನಗೊಳಿಸುವುದು.

2.23 ಪಿ-ಕೋಡ್ 3512ರ ಅಡಿಯಲ್ಲಿ ರೂ.100.00 ಲಕ್ಷಗಳ ಚಾಲ್ತಿ ಅನುದಾನವನ್ನು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಂವಿಧಾನ ಪುಸ್ತಕದ ಭೋದನೆಗಾಗಿ ವಿತರಣೆ (ಕರ್ನಾಟಕ ಎಸ್.ಸಿ/ಎಸ್.ಟಿ ಗ್ರಾಜುಯೇಟ್ ಅಸೋಸಿಯೇಷನ್ (ರಿ.)) ಕಾರ್ಯಕ್ರಮಕ್ಕೆ ನಿಗಧಿಪಡಿಸಲಾಗಿರುತ್ತದೆ. ಸದರಿ ಸಂಸ್ಥೆಯವರ ಕೋರಿಕೆಯಂತೆ ಬಿಬಿಎಂಪಿ ವ್ಯಾಪ್ತಿಗೆ ಬರುವ ಶಾಲಾ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ಭಾರತದ ಸಂವಿಧಾನ ಪುಸ್ತಕ ವಿತರಣೆ, ಸಂವಿಧಾನದ ತಜ್ಞರಿಂದ ವಿಚಾರಗೋಷ್ಠಿ ಹಾಗೂ ಬೆಂಗಳೂರು ಸ್ವಚ್ಛತೆಯ ಬಗ್ಗೆ ನಾಗರಕೆರಲ್ಲಿ ಅರಿವು ಮೂಡಿಸುವ ಜಾಥಾ ಕಾರ್ಯಕ್ರಮಗಳನ್ನು ಪಾಲಿಕೆಯ ವಿದ್ಯಾ ಇಲಾಖೆಯಿಂದು ಹಮ್ಮಿಕೊಳ್ಳಲು ಮುಂಗಡವಾಗಿ ಶೇ.50 ರಷ್ಟು ಮೊತ್ತವನ್ನು ಹಾಗೂ ಸದರಿ ಸಂಸ್ಥೆಯವರಿಂದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ ನಂತರ ಖರ್ಚು/ವೆಚ್ಚದ ಬಗ್ಗೆ ಸೂಕ್ತ ದಾಖಲಾತಿಗಳನ್ನು ಪಡೆದು ವಿದ್ಯಾ ಇಲಾಖೆಯಿಂದ ಪರಿಶೀಲಿಸಿದ ನಂತರ ನಿಯಮಾನುಸಾರ ಉಳಿದ ಶೇ.50 ಮೊತ್ತವನ್ನು ಬಿಡುಗಡೆ ಮಾಡುವುದು.

## 3 3. 2019-20 ನೇ ಸಾಲಿನ ಆಯವ್ಯಯದ ಚಾಲ್ತಿ ಅನುದಾನಗಳಿಗೆ ಸಂಬಂಧಿಸಿದಂತೆ 24.10% ಎಸ್.ಸಿ/ಎಸ್.ಟಿ ಕಲ್ಯಾಣ ಯೋಜನೆಗಳಡಿ ಮೂಲಭೂತ ಸೌಕರ್ಯಗಳು (ಸಾಮೂಹಿಕ ಕಾರ್ಯಕ್ರಮಗಳು)

3.1 ಪಿ-ಕೋಡ್ 3709 ರ ಅಡಿಯಲ್ಲಿ ರೂ. 500.00 ಲಕ್ಷಗಳ ಅನುದಾನವನ್ನು ಬಿಟಿಎಂ ವಿಧಾನಸಭಾ ಕ್ಷೇತ್ರದ ರಾಜೇಂದ್ರನಗರ ಸ್ಲಂನಲ್ಲಿ ಅಂಗನವಾಡಿ ಶಾಲೆ, ಸಮುದಾಯಭವನ ನಿರ್ಮಾಣಕ್ಕಾಗಿ ನಿಗಧಿಪಡಿಸಲಾಗಿದೆ. ಸದರಿ ಕಾರ್ಯಕ್ರಮವನ್ನು ಕಾಮಗಾರಿ ಶಾಖೆಯಿಂದ ದಕ್ಷಿಣ ವಲಯದ ಮುಖ್ಯ ಅಭಿಯಂತರರು ರವರು ನಿಯಮಾನುಸಾರ ರೂಪುರೇಷೆ ಹಾಗೂ ಮಾರ್ಗಸೂಚಿಗಳನ್ನು ಸಿದ್ಧಪಡಿಸಿಕೊಂಡು ಮತ್ತು ಅನುದಾನ ಹಂಚಿಕೆ ಹಾಗೂ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಪ್ರಧಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಖಾಂತರ ಅನುಷ್ಠಾನಗೊಳಿಸುವುದು.

3.2 2019-20ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-1878 ರೂ.11000.00 ಲಕ್ಷಗಳ ಚಾಲ್ತಿ ಅನುದಾನವನ್ನು ಮೂಲಭೂತ ಸೌಕರ್ಯಗಳಿಗೆ(ಸಮುದಾಯ ಕಾರ್ಯಕ್ರಮ) ಸಮಿತಿಯು ಪರಿಶಿಷ್ಟ ಜಾತಿ/ಪಂಗಡದ ಸಮುದಾಯದವರು ಶೇ.50ಕ್ಕಿಂತ ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ರಸ್ತೆ, ಚರಂಡಿ, ಒಳಚರಂಡಿ, ಕುಡಿಯುವ ನೀರು, ಬೀದಿ ದೀಪಗಳು, ಸಾಮೂಹಿಕ ಶೌಚಾಲಯಗಳು ಮತ್ತು ಇತರೆ ಅಭಿವೃದ್ಧಿ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸ್ಥಳೀಯ ಪಾಲಿಕೆ ಸದಸ್ಯರು ಹಾಗೂ ಶಾಸಕರು ಕೋರಿರುವ ಮೇರೆಗೆ ಲೆಕ್ಕಶೀರ್ಷಿಕೆಯಲ್ಲಿ ಲಭ್ಯವಿರುವ ಅನುದಾನದಕ್ಕೆ ಮಿತಿಗೊಳಿಸಿ ವಾರ್ಡ್ ಸಂಖ್ಯೆ:175, 188, 194, 187, 139, 72, 39, 159, 12, 91, 10, 9, 27, 150, 60, 40, 11, 138, ಮತ್ತು ವಾರ್ಡ್ ಸಂಖ್ಯೆ: 4ಕ್ಕೆ ಪ್ರತಿ ವಾರ್ಡ್‌ಗೆ ರೂ. 100.00ಲಕ್ಷಗಳಂತೆ, ವಾರ್ಡ್ ಸಂಖ್ಯೆ 147, 32, 31, 197, 92, ಮತ್ತು ವಾರ್ಡ್ ಸಂಖ್ಯೆ: 9ಕ್ಕೆ ಪ್ರತಿ ವಾರ್ಡ್‌ಗೆ ರೂ. 150.00ಲಕ್ಷಗಳಂತೆ, ವಾರ್ಡ್ ಸಂಖ್ಯೆ: 77, 94, 95, 96, 40, 3, 6, 83, 86, 85, 12, 149, 6, 61, ಮತ್ತು ವಾರ್ಡ್ ಸಂಖ್ಯೆ 22ಕ್ಕೆ ಪ್ರತಿ ವಾರ್ಡ್‌ಗೆ ರೂ.200.00ಲಕ್ಷಗಳಂತೆ, ವಾರ್ಡ್ ಸಂಖ್ಯೆ: 4ಕ್ಕೆ ರೂ.250.00ಲಕ್ಷಗಳು, ವಾರ್ಡ್

8

ಸಂಖ್ಯೆ 99ಕ್ಕೆ ರೂ. 300.00ಲಕ್ಷಗಳಂತೆ, ವಾರ್ಡ್ ಸಂಖ್ಯೆ: 124, 133, 13, 198, ಸಂಖ್ಯೆ 120ಕ್ಕೆ ಪ್ರತಿ ವಾರ್ಡ್‌ಗೆ ರೂ. 400.00ಲಕ್ಷಗಳಂತೆ, ವಾರ್ಡ್ ಸಂಖ್ಯೆ: 72, 130 ವಾರ್ಡ್ ಸಂಖ್ಯೆ. 59ಕ್ಕೆ ಪ್ರತಿ ವಾರ್ಡ್‌ಗೆ ರೂ. 500.00ಲಕ್ಷಗಳಂತೆ, ವಾರ್ಡ್ ಸಂಖ್ಯೆ. 117ಕ್ಕೆ ರೂ. 599.00ಲಕ್ಷಗಳು, ವಾರ್ಡ್ ಸಂಖ್ಯೆ. 108ಕ್ಕೆ ರೂ. 51.00ಲಕ್ಷಗಳು, ವಾರ್ಡ್ ಸಂಖ್ಯೆ. 157 ಮತ್ತು 139ಕ್ಕೆ ಪ್ರತಿ ವಾರ್ಡ್‌ಗೆ ರೂ.25.00ಲಕ್ಷಗಳಂತೆ ವಾರ್ಡ್ ಸಂಖ್ಯೆ. 51ಕ್ಕೆ ಮತ್ತು 52ಕ್ಕೆ ಪ್ರತಿ ವಾರ್ಡ್‌ಗೆ ರೂ. 55.00ಲಕ್ಷಗಳು, ವಾರ್ಡ್ ಸಂಖ್ಯೆ. 25ಕ್ಕೆ ರೂ. 65.00ಲಕ್ಷಗಳು, ವಾರ್ಡ್ ಸಂಖ್ಯೆ. 26ಕ್ಕೆ ರೂ.75.00ಲಕ್ಷಗಳು, ವಾರ್ಡ್ ಸಂಖ್ಯೆ. 40ಕ್ಕೆ ರೂ. 200.00ಲಕ್ಷಗಳು, ಅನುದಾನವನ್ನು ಸಮಿತಿಯು ಹಂಚಿಕೆ ಮಾಡಿದೆ, ಈ ವಾರ್ಡ್‌ಗಳಲ್ಲಿ ಸ್ಥಳೀಯ ಪಾಲಿಕೆ ಸದಸ್ಯರು / ಶಾಸಕರು ಸೂಚಿಸುವ ಕಾಮಗಾರಿಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿಕೊಂಡು ಹಂಚಿಕೆ ಮಾಡಿರುವ ವಾರ್ಡ್‌ಗಳ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಜಾಬ್‌ಕೋಡ್ ನೀಡಿ, ಪರಿಶಿಷ್ಟ ಜಾತಿ/ಪಂಗಡದ ಸಮುದಾಯದವರಿಗೆ ತುರ್ತಾಗಿ ಮೂಲ ಸೌಕರ್ಯಗಳನ್ನು ಒದಗಿಸುವ ಹಿತದೃಷ್ಟಿಯಿಂದ ಕಾಮಗಾರಿಗಳನ್ನು ಮೆ॥ ಕೆಆರ್‌ಐಡಿಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳಲು ಹಾಗೂ ಯಾವುದೇ ಲೋಪವಾಗದಂತೆ ಕಾಮಗಾರಿಗಳನ್ನು ಮುಖ್ಯ ಅಭಿಯಂತರರು ರವರು ನಿಯಮಾನುಸಾರ ರೂಪುರೇಷೆ ಹಾಗೂ ಮಾರ್ಗಸೂಚಿಗಳನ್ನು ಸಿದ್ದಪಡಿಸಿಕೊಂಡು ಮತ್ತು ಅನುದಾನ ಹಂಚಿಕೆ ಹಾಗೂ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಪ್ರಧಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಖಾಂತರ ಅನುಷ್ಠಾನಗೊಳಿಸುವುದು.

3.3 ಪಿ– 2652 ರಡಿಯಲ್ಲಿ ರೂ.500.00 ಲಕ್ಷಗಳನ್ನು ಮೀಸಲಿರಿಸಿರುವ ಅನುದಾನವನ್ನು ಪರಿಶಿಷ್ಟ ಜಾತಿ/ಪಂಗಡದ ಸಮುದಾಯದವರು ಶೇ.50ಕ್ಕಿಂತ ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಸದ್ಬಳಕೆ ಮಾಡುವ ನಿಟ್ಟಿನಲ್ಲಿ ರಸ್ತೆಗಳು, ಕಾಂಕ್ರೀಟ್ ರಸ್ತೆಗಳು, ಕಲ್ವರ್ಟ್‌ಗಳು, ಚರಂಡಿಗಳು, ಒಳಚರಂಡಿ, ಕುಡಿಯುವ ನೀರು, ಬೀದಿ ದೀಪಗಳು, ಶೌಚಾಲಯಗಳು ಮತ್ತು ಇತರೆ ಅಭಿವೃದ್ಧಿ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸಮಿತಿಯು ಅಭಿಪ್ರಾಯಿಸಿ ಪಾಲಿಕೆ ಸದಸ್ಯರು ಹಾಗೂ ಶಾಸಕರು ಕೋರುವ ಕಾಮಗಾರಿಗಳನ್ನು ಕೈಗೊಳ್ಳಲು ಈ ಲೆಕ್ಕಶೀರ್ಷಿಕೆಯಲ್ಲಿ ಲಭ್ಯವಿರುವ ಅನುದಾನದಕ್ಕೆ ಮಿತಿಗೊಳಿಸಿ ವಾರ್ಡ್ ಸಂಖ್ಯೆ: 130ಕ್ಕೆ ರೂ.100.00ಲಕ್ಷಗಳು, ವಾರ್ಡ್ ಸಂಖ್ಯೆ: 133ಕ್ಕೆ ರೂ.199.00ಲಕ್ಷಗಳು, ವಾರ್ಡ್ ಸಂಖ್ಯೆ. 13ಕ್ಕೆ ರೂ.100.00ಲಕ್ಷಗಳು ಮತ್ತು ವಾರ್ಡ್ ಸಂಖ್ಯೆ. 117ಕ್ಕೆ ರೂ.100.00ಲಕ್ಷಗಳು ಅನುದಾನವನ್ನು ಸಮಿತಿಯು ಹಂಚಿಕೆ ಮಾಡಿ ತೀರ್ಮಾನಿಸಿದೆ. ಈ ವಾರ್ಡ್‌ಗಳ ವ್ಯಾಪ್ತಿಯಲ್ಲಿನ ಕಾಮಗಾರಿಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿಕೊಂಡು ಸದರಿ ಕಾಮಗಾರಿಗಳಿಗೆ ಜಾಬ್‌ಕೋಡ್ ನೀಡಿ, ಪರಿಶಿಷ್ಟ ಜಾತಿ/ಪಂಗಡದ ಸಮುದಾಯದವರಿಗೆ ತುರ್ತಾಗಿ ಮೂಲ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾಮಗಾರಿಗಳನ್ನು ಮೆ॥ ಕೆಆರ್‌ಐಡಿಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳಲು ಹಾಗೂ ಯಾವುದೇ ಲೋಪವಾಗದಂತೆ ಸದರಿ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ಸಮಿತಿಯು ತೀರ್ಮಾನಿಸಿದ್ದು ಕಾಮಗಾರಿಗಳನ್ನು ಮುಖ್ಯ ಅಭಿಯಂತರರು ರವರು ನಿಯಮಾನುಸಾರ ರೂಪುರೇಷೆ ಹಾಗೂ ಮಾರ್ಗಸೂಚಿಗಳನ್ನು ಸಿದ್ದಪಡಿಸಿಕೊಂಡು ಮತ್ತು ಅನುದಾನ ಹಂಚಿಕೆ ಹಾಗೂ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಪ್ರಧಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಖಾಂತರ ಅನುಷ್ಠಾನಗೊಳಿಸುವುದು.

ರೂ. 1.00 ಲಕ್ಷಗಳನ್ನು ಮೂಲಭೂತ ಸೌಕರ್ಯಗಳಿಗಾಗಿ ಕಾಮಗಾರಿಗಳನ್ನು ಮುಖ್ಯ ಅಭಿಯಂತರರು ರವರು ನಿಯಮಾನುಸಾರ ರೂಪುರೇಷೆ ಹಾಗೂ ಮಾರ್ಗಸೂಚಿಗಳನ್ನು ಸಿದ್ದಪಡಿಸಿಕೊಂಡು ಮತ್ತು ಅನುದಾನ ಹಂಚಿಕೆ ಹಾಗೂ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಮಾನ್ಯ ಆಯುಕ್ತರವರ ಅನುಮೋದನೆಯೊಂದಿಗೆ ಪ್ರಧಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಖಾಂತರ ಅನುಷ್ಠಾನಗೊಳಿಸುವುದು.

ಕಾರ್ಯಕ್ರಮಗಳು ಶೀಘ್ರ ಅನುಷ್ಠಾನಗೊಳಿಸುವ ಉದ್ದೇಶದಿಂದ [illegible] ಕಾರ್ಯಕ್ರಮಗಳನ್ನು ಮಾರ್ಗಸೂಚಿಯನ್ವಯ ನಿಯಮಾಸಾರ ವಲಯ ಮಟ್ಟದಲ್ಲಿ ಕ್ರಮ[illegible]

ಕ್ರಿಯಾ ಯೋಜನೆಯಲ್ಲಿ ನಿಗಧಿಪಡಿಸಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ [illegible] ಮಾರ್ಗಸೂಚಿ/ಸುತ್ತೋಲೆ/ಮಾರ್ಗದರ್ಶನ/ನಿರ್ದೇಶನ ಅವಶ್ಯವಿದ್ದಲ್ಲಿ ಹಾಗೂ ಲಭ್ಯವಿರುವ ಸುತ್ತೋಲೆ ಮತ್ತು ಮಾರ್ಗಸೂಚಿಗಳ ಪರಿಷ್ಕರಣೆಯಾಗಬೇಕಾದಲ್ಲಿ ಯಾವುದೇ ರೀತಿಯ ವಿಳಂಬಮಾಡದೆ ಪತ್ರಮುಖೇನ ವಿವರವಾಗಿ ಪ್ರಸ್ತಾವನೆಗಳನ್ನು ವಿಶೇಷ ಆಯುಕ್ತರು(ಕಲ್ಯಾಣ)ರವರಿಗೆ ಸಲ್ಲಿಸಿ ಸೂಕ್ತ ಅನುಮೋದನೆಯೊಂದಿಗೆ ಕ್ರಮವಹಿಸುವುದು.

ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ರವರಿಗೆ:-

1. ವಿಶೇಷ ಆಯುಕ್ತರು, ಆಡಳಿತ/ಕಲ್ಯಾಣ/ಯೋಜನೆ/ ಹಣಕಾಸು/ ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ/ಶಿಕ್ಷಣ, ಬಿಬಿಎಂಪಿ, ರವರಿಗೆ . . . . ಸೂಕ್ತ ಕ್ರಮಕ್ಕಾಗಿ
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನಾ ಮಂಡಳಿ
3. ಪ್ರಧಾನ ಅಭಿಯಂತರರು, ಕೇಂದ್ರ ಕಛೇರಿ
4. ಕೌನ್ಸಿಲ್ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಪಾಕೆಯ ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರು ರವರಿಗೆ ಮತ್ತು ಸದಸ್ಯರುಗಳ ಗಮನಕ್ಕೆ ತರಲು ಸೂಚಿಸಿದೆ.
5. ಅಪರ / ಜಂಟಿ ಆಯುಕ್ತರು, ಪೂರ್ವ/ಪಶ್ಚಿಮ/ದಕ್ಷಿಣ/ಬೊಮ್ಮನಹಳ್ಳಿ/ಯಲಹಂಕ /ಮಹದೇವಪುರ/ರಾಜರಾಜೇಶ್ವರಿನಗರ/ದಾಸರಹಳ್ಳಿ ವಲಯ ರವರಿಗೆ . . .ಸೂಕ್ತ ಕ್ರಮಕ್ಕಾಗಿ
6. ಮುಖ್ಯ ಅಭಿಯಂತರು, ಪೂರ್ವ/ಪಶ್ಚಿಮ/ದಕ್ಷಿಣ/ಬೊಮ್ಮನಹಳ್ಳಿ/ಯಲಹಂಕ/ಮಹದೇವಪುರ/ ರಾಜರಾಜೇಶ್ವರಿನಗರ/ದಾಸರಹಳ್ಳಿ ವಲಯ ರವರಿಗೆ(ವಲಯ ಕಲ್ಯಾಣಾಧಿಕಾರಿಗಳ ಮೂಲಕ)
7. ಮುಖ್ಯ ಲೆಕ್ಕಾಧಿಕಾರಿಗಳುರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
8. ಮುಖ್ಯ ಆರ್ಥಿಕಾಧಿಕಾರಿಗಳು ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರು, ಎಂಪಿಇಡಿ. ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.

<u>ಪ್ರತಿಯನ್ನು:</u>

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಲಾಗಿದೆ.
2. ಮಾನ್ಯ ಅಧ್ಯಕ್ಷರು, ಸಾ.ನ್ಯಾ.ಸ್ಥಾಯಿ ಸಮಿತಿಯವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಲಾಗಿದೆ.
3. ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಲಾಗಿದೆ.